ಕೊರವಂಜಿ



ಜೂನ್

೧೯೫೪

★

ಸಂಪಾದಕರು :

ಶ್ರೀ॥ ರಾ. ಶಿ.

ಬರಹಗಾರರು :

ಶ್ರೀಮತಿ ವಿಮ್ಲಾ
ಶ್ರೀ॥ ಹಾ. ರಾ.
ಶ್ರೀ॥ ರೇವಣ್ಣ
ಶ್ರೀ॥ ಕೇಸರಿ
ಶ್ರೀ॥ ಅ. ರಾ. ಸೇ.
ಶ್ರೀಮತಿ ಕೇಸರಿ
ಶ್ರೀ॥ ರಾಮಕೃಷ್ಣ
ಶ್ರೀ॥ ಪಾಟಾಳಿ
ಶ್ರೀ॥ ನಾ. ಕ.
ಶ್ರೀ॥ "ಕೇಫ"
ಶ್ರೀ॥ ಬೆ. ಚಂ.

ಇತ್ಯಾದಿ, ಇತ್ಯಾದಿ.

ಬಿಡಿ ಪ್ರತಿ ಕೇವಲ ನಾಲ್ಕಾಣೆ

ತಿಳಿನಗೆಯ ಮಾಸಪತ್ರಿಕೆ



SHALIMAR PAINT, COLOUR & VARNISH CO., LTD.,

Post Box 136, Madras 1


ಜೂನ್ ತಿಂಗಳಲ್ಲಿ ಪ್ರಾರಂಭ!
ಎ.ವಿ.ಯಂ.ರವರ
ಪೆಣ್
ತಮಿಳು
AVM
PRODUCTIONS
a TALLAM

ಜೂನ್ ತಿಂಗಳಲ್ಲಿ ಪ್ರದರ್ಶನಕ್ಕೆ ಬರುತ್ತದೆ



ಅಂಜಲಿ — ಕೆ. ಆರ್. ರಾಮಸ್ವಾಮಿ — ಪದ್ಮಿನಿ

ರಾಜೇಂದ್ರ — ಆರ್. ಬಾಲಸುಬ್ರಮಣ್ಯಂ.

ಇವರ ಅಭಿನಯ

ನಿರ್ದೇಶನ: ಎ. ಕಾಶಿಲಿಂಗಂ

RAGHAVENDRA RELEASE

ವೇ 28ರಿಂದ ಪ್ರದರ್ಶನಾರಂಭ

ಬೆಂಗಳೂರು :

ಜೈಹಿಂದ್—ಸೂಪರ್—ಅಶೋಕ

(ಸಿವಿಲ್ ಏರಿಯಾ)

ಮೈಸೂರು: ಲಕ್ಷ್ಮೀ ಚಿತ್ರಮಂಧಿರಗಳಲ್ಲಿ

ದಿನವಹಿ 3 ಪ್ರದರ್ಶನಗಳು



★

ಜಯಶಕ್ತಿಯವರ—

ನಲ್ಲಕಾಲಂ

(ತಮಿಳು)

★

ಎಂ. ಕೆ. ರಾಧ, ಟಿ. ಎಸ್. ಬಾಲಯ್ಯ ಪಂಡರಿಬಾಯಿ
ಪುಷ್ಯೇಂದ್ರಮಣಿ, ಎನ್. ಎಸ್. ಕೃಷ್ಣನ್,
ಟಿ. ಎ. ಮಧುರಂ

ಪರಿಪೂರ್ಣವಾಗಿ ಮೆಚ್ಚುಗೆಯಾಗಬಲ್ಲ ಉತ್ತಮ ಮನರಂಜಕ ಚಿತ್ರ

ಕೊರವಂಜಿ

ಸಂಪುಟ ೧೩ ಜೂನ್ ೧೯೫೪ ಸಂಚಿಕೆ ೩

ಕುಹಕಿಡಿಗಳು

ಮೊನ್ನೆ ಗಾಂಧಿನಗರದಲ್ಲಿ, ಜವಹರ ರಸ್ತೆಯಲ್ಲಿ, ಪಟೇಲ ಭವನದಲ್ಲಿ ನಡೆದ ಭಾರೀ ಕಳ್ಳತನವನ್ನು, ತನಿಖೆ ಮಾಡುತ್ತಿರುವಾಗ ಪೋಲೀಸಿನವರಿಗೆ ಕಳ್ಳಧರಿಸಿದ್ದ ಕನ್ನಡಕ ಸಿಕ್ಕಿದೆಯಂತೆ!

—ಈಗ ಪೋಲೀಸಿನವರು ಕನ್ನಡಕ ಇಲ್ಲದೆ ಇರುವವರನ್ನೆಲ್ಲಾ ತಲಾಷ್ ಮಾಡುತ್ತಿದ್ದಾರಂತೆ.

* * *

ನಮ್ಮಲ್ಲಿ "ಹುಲಿಬಂತು ಹುಲಿಬಂತು" ಕತೆ ಇಲ್ಲವೇ?

—ಅದನ್ನೇ ಈಗ "ಮೆಕಾರ್ಥಿ ಬಂದ, ಮೆಕಾರ್ಥಿ ಬಂದ" ಅಂತ ಅಮೆರಿಕಾ ಸೈನ್ಯದಲ್ಲಿ ಕತೆ ಹೇಳುತ್ತಿದ್ದಾರಂತೆ.

* * *

ಕೇಂದ್ರ ಆಹಾರ ಸಚಿವರು ಕರ್ನಾಟಕಕ್ಕೆ ಬಂದಾಗ, ಸ್ಥಳೀಯ ಪತ್ರಿಕೆಯೊಂದು "ಕಿಡಿವಾಯರ ಆಗಮನ" ಎಂದು ಶಿರೋನಾಮೆ ಹಾಕಿತ್ತಂತೆ.

* * *

ನನಗೆ ಸಕ್ಕರೆ ವ್ಯಾಧಿ ಅಂತ ಡಾಕ್ಟರು ಹೇಳೋ ಹೊತ್ತಿಗೆ ಸರಿಯಾಗಿ ನಮ್ಮೂರಿನಲ್ಲಿ ಸಾಕಷ್ಟು ಅಕ್ಕಿ ದೊರೆಯುತ್ತದೆ ಎಂದು ಸಚಿವರು ಹೇಳ್ತಾರಲ್ಲಾ! ಎಂದು ಓದುಗರೊಬ್ಬರು ಅಳುಕಾಗದ ಬರೆದಿದ್ದಾರೆ.

* * *

ಇತ್ತೀಚಿನ ಕಾದಂಬರಿಗಳಲ್ಲಿ ಜೀವಂತ ವ್ಯಕ್ತಿಗಳನ್ನು ಬಲು ಸುಲಭವಾಗಿ ಗುರ್ತಿಸಬಹುದು.

—ಅದೇನು ಮಹಾ! ಇತ್ತೀಚಿನ ಆತ್ಮಚರಿತ್ರೆಗಳಲ್ಲಿ ಬರೆದವನನ್ನೂ ಗುರ್ತಿಸ ಬಹುದಲ್ಲವೇ?

* * *

ರೂಪಸ್ಥೆಯರು ಎಲೆ ಅಡಿಕೆ ಹಾಕಿಕೊಂಡರೆ ಬಲು ಚನ್ನಂತೆ.

—ರೂಪಸ್ಥೆಯರು ಎಲೆ ಅಡಿಕೆ ಕೊಟ್ಟರೆ ಇನ್ನೂ ಚೆನ್ನು, ಅಲ್ಲವೇ?

* * *

ಕ್ರಾಸ್‌ವರ್ಡ್‌ನಲ್ಲೇ ಮಗ್ನಳಾಗಿದ್ದಾಳೆ ಎಂದು ಇನ್ನುಮೇಲೆ ಗಂಡಂದಿರು ವಿವಾಹವಿಚ್ಛೇದನ ಪಡೆಯಬಹುದಂತೆ, ಕಾನೂನು ಪ್ರಕಾರ—

—ಆದರೆ ಡಿಕ್ಷನರಿ ಯಾರಿಗೆ ಸೇರಬೇಕು ಎಂಬುವುದು ಇನ್ನೂ ನಿರ್ಧಾರವಾಗಿಲ್ಲ ವಂತೆ.

* * *

ಅಂಚೆ ಇಲಾಖೆಯ ಶತವಾರ್ಷಿಕೋತ್ಸವದ ಸಲುವಾಗಿ, ಸ್ಟಾಂಪುಗಳಿಗೆ ಹಾಕುವ ಗೋಂದಿನಲ್ಲಿ ಸಕ್ಕರೆ ಬೆರಸುತ್ತಾರೆ ಎಂಬುದು ಸುಳ್ಳಂತೆ.

* * *

ಇನ್ನುಮೇಲೆ ದೇಶಸೇವೆ ಮಾಡಿದ ರಾಜಕಾರಣಿಗಳಿಗೆಲ್ಲಾ ಪಾರಿತೋಷಕ ಕೊಡುವ ಯೋಜನೆ ಮಾಡಲಾಗುತ್ತಿದೆಯಂತೆ.

—ಅಂದಮೇಲೆ, ಪಾರಿತೋಷಕ ಸಿಗದೇ ಇದ್ದ ನಮಗೆ, ಈ ಕಾರಣದಿಂದಲೇ ದೊಡ್ಡ ಪಾರಿತೋಷಕ ಸಿಗಬೇಕು ಅಲ್ಲವೇ?

* *

ಸಚಿವರೆಲ್ಲಾ ಇಷ್ಟು ತರಾತುರಿ ಪ್ರವಾಸಗಳನ್ನು ಮೇಲಿಂದ ಮೇಲೆ ಏಕೆ ಇಟ್ಟು ಕೊಳ್ಳುತ್ತಾರೆ ಗೊತ್ತೆ?

—ಮನೆಯಲ್ಲಿ ಆಕೆ ಇತ್ತ ಅಣತಿಗಳನ್ನು ಸಕಾರದಲ್ಲಿ ಜಾರಿಗೆ ತರಲು ಸಾಧ್ಯವಾಗದ ಕಾರಣ.

* * *

ಉರಿಗಾಳು

ಆಧುನಿಕ ಕನ್ನಡ ಕಾದಂಬರಿಗಳನ್ನು ಓದುವ ತರುಣರು, ತಮ್ಮ ಸ್ನೇಹಿತರು ಚೆಲುವೆಯರನ್ನು ಮದುವೆಯಾದರೆ ಸಾಕು, ತಮ್ಮ ಪತ್ನಿಯರು ಹೇಗಾದರೂ ಇರಲಿ, ಎಂಬ ತ್ಯಾಗಬುದ್ಧಿಯನ್ನು ತೋರಿಸಲು ಪ್ರಾರಂಭಿಸಿದಾರಂತೆ.

* * *

ನವ್ಯರೀತಿಯಲ್ಲಿ ಕಾವ್ಯ ಬರೆಯುತ್ತಿದ್ದ ಒಬ್ಬ ಕವಿ ಈಗ ಗುಣಮುಖವಾಗುತ್ತಿದಾನೆ ಎಂಬ ಸುದ್ದಿ ಬಂದಿದೆ....ಖಾಯಿಲೆಯ ವಿವರಗಳನ್ನು ತಿಳಿದವರು ಈ ಸುದ್ದಿಯನ್ನು ನಂಬುವಂತಿಲ್ಲ.

* * *

ಕುದುರೆಗಳಿಗೆ ಕೆಮ್ಮು ಬಂದಿರುವುದರಿಂದ ರೇಸುಗಳನ್ನು ವಜಾಮಾಡಲಾಗಿದೆ (ಸುದ್ದಿ) ಯಾವ ಕುದುರೆ ಹೆಚ್ಚು ಕೆಮ್ಮುತ್ತದೆ, ಎಂಬುದರಲ್ಲೇ ಏಕೆ ಬಾಜಿಕಟ್ಟಬಾರದು ಎಂದು ಜೂಜು ಪ್ರೇಮಿಗಳೊಬ್ಬರು ಕೇಳುತ್ತಿದಾರೆ.

* * *

"ಬೆಂಗಳೂರಲ್ಲಿ ಬಿಸಿಲು ಒಲೆ ಬೇಳೆ ಬೇಯಿಸದು" (ಸುದ್ದಿ)

— ಈಗಿನ ರಾಜಕೀಯ ವಾತಾವರಣದಲ್ಲಿ, ಯಾರ ಬೇಳೆಯೂ ಬೇಯುವಂತಿಲ್ಲ.

* * *

"ಬುದ್ಧಿವಂತಳು" ಎಂದು ಮೆಚ್ಚಿ, ಹುಡುಗಿಯನ್ನು ಮದುವೆಗಾಗಿ ಆರಿಸಬೇಡಿ; ಏಕೆಂದರೆ, ಬುದ್ಧಿವಂತಳಾಗಿದ್ದರೆ, ಬುದ್ಧಿವಂತಳು ಎಂದು ತೋರಿಸಿ ಕೊಳ್ಳಕೂಡದು, ಎಂಬ ಬುದ್ಧಿ ಇದ್ದೇ ಇರುತ್ತದೆ, ಆಕೆಗೆ.

" * *

ನಾಲಗೆಗೆ ರುಚಿಯಾಗಿಲ್ಲದಿದ್ದರೂ, ಹೊಟ್ಟೆ ತುಂಬುವ ಆಹಾರವೊಂದನ್ನು ಕೇಂದ್ರ ಆಹಾರ ಸಂಶೋಧನಾಕ್ಷೇತ್ರದಲ್ಲಿ ತಯಾರು ಮಾಡಲು ಪ್ರಯತ್ನಿಸಬಹುದಂತೆ. ಬದುಕುವುದಕ್ಕಾಗಿ ಮಾತ್ರ ಊಟ, ಊಟಕ್ಕಾಗಿ ಬದುಕಬಾರದು, ಎಂಬ ಉಪದೇಶಕರಿಗೆ ಇದು ಒಳ್ಳೆಯ ಸುದ್ದಿ.

* * *

ಜಿನಿವಾಸಮ್ಮೇಳನದಲ್ಲಿ ಇಷ್ಟರಲ್ಲೇ ಉಭಯಪಕ್ಷದವರೂ ಯುದ್ಧಸ್ತಂಭನ ನೆಲೆಗೊಳಿಸಿ ಶಾಂತಿ ಸಂಭಾಷಣೆಗಳನ್ನು ಪ್ರಾರಂಭಿಸುವಂತೆ ನೆಹರೂರವರು ಸಲಹೆ ಕೊಡುವರಂತೆ.... .. ಹೌದು; ಸಮ್ಮೇಳನದಲ್ಲಿದ್ದರೂ ಯುದ್ಧಸ್ತಂಭನ ವಾಗಲಿ.

* * *

ಪಾಕಿಸ್ತಾನ್ ಆಟಗಾರರಿಗೆ ಪ್ರಚಂಡ ಜಯ (ಸುದ್ದಿ) ೧೯೪೭ರ ಹಿಂದಾಗಿದ್ದಿದ್ದರೆ, ನಾವೂ ಸಂತೋಷ ಪಡಬಹುದಾಗಿತ್ತು.

*   *   *

ಬಡ್ಜೆಟ್ ಅಧಿವೇಶನ ಮುಗಿಯುವವರೆಗೂ ವಿವಾಹ ವಿಚ್ಛೇದನವನ್ನು ಚರ್ಚಿಸಲಾಗುತ್ತೆ........ಮನೆ ಮನೆಯಲ್ಲಿಯು ಇದೇ ಕಾರ್ಯಕ್ರಮ, ತಿಂಗಳು ತಿಂಗಳಿಗೂ ನಡಿಯುತ್ತಿದೆ.

*   *   *

ಗಂಡಹೆಂಡಿರ ಪರಸ್ಪರ ಸಮ್ಮತಿಯಿಂದ ವಿವಾಹ ವಿಚ್ಛೇದನ ಎಂಬ ಅಂಶವನ್ನು ಅನೇಕರು ತೀವ್ರ ಖಂಡಿಸಿದಾರೆ....ಒಬ್ಬರ ಅಸಮ್ಮತಿಯೇ ಸಾಕು, ವಿವಾಹ ವಿಚ್ಛೇದನಕ್ಕೆ, ಎಂಬುದು ನಮ್ಮ ಅಭಿಪ್ರಾಯ, ಒಬ್ಬರದೆಂದರೆ, ಗೊತ್ತೇಇದೆ, ಹೆಂಡತಿಯದು.

*   *   *

ಭದ್ರಾನದಿಯಲ್ಲಿ ಪ್ರವಾಹ ಬಂದು ವಿದ್ಯುಚ್ಛಕ್ತಿ ಯಂತ್ರಗಳು ಮುಳುಗಿವೆ.... ಭದ್ರಾ! ಭದ್ರಾ! ಎಂದು ಎಚ್ಚರಿಕೆ ಕೊಡುತ್ತಲೇ ಇದ್ದೆವಲ್ಲಾ, ಇಂಜಿನಿಯರುಗಳಿಗೆ.

*   *   *

ಜಿನೀವಾದ ದೂರ ಪ್ರಾಚ್ಯಸಮ್ಮೇಳನ ವಿಫಲ, ಎಂದು ಹೇಳಲು ಇನ್ನೂ ಕೊಂಚ ತಡವಾಗಬಹುದೆಂದು ಈಡನ್‌ರು ಚರ್ಚಿಲ್‌ರಿಗೆ ತಿಳಿಸಿದರು....ಈಡನ್ ರವರು ತುಂಬಾ ನಿಧಾನಸ್ಥರು.

*   *   *

ರಾಜಾಜಿ ವಿದ್ಯಾಭ್ಯಾಸ ಸುಧಾರಣೆಯನ್ನು ಹೊಸ ಮದ್ರಾಸ್ ಮಂತ್ರಿಮಂಡಲ ಕೈ ಬಿಟ್ಟಿದೆ ಮೈಸೂರಿನಲ್ಲೂ, ವಿದ್ಯಾಭ್ಯಾಸ ಸುಧಾರಣೆಗಳನ್ನು ಜಾರಿಮಾಡಿದರೆ ಅನುಕೂಲ; ಮುಂದೆ ಬರುವವರಿಗೆ ಅವನ್ನು ರದ್ದುಮಾಡಲು ಅವಕಾಶ ಸಿಗುತ್ತೆ.

*   *   *

“ಬೆಂಗಳೂರಿಗೂ ಒಂದು ಜೂ ಅತ್ಯವಶ್ಯಕ; ಬೆಂಗಳೂರು ಹುಡುಗರನೇಕರು ಆನೆಯನ್ನೇ ನೋಡಿಲ್ಲ” (ಪತ್ರಿಕೆ) ಇಂತಹ ಹೇಳಿಕೆಗಳಿಂದ ತಮಗೆ ಅಪಮಾನವಾಗುತ್ತಿದೆ, ಎಂದು ಅನೇಕರು ನಮಗೆ ಪತ್ರಬರೆದಿದಾರೆ.

*   *   *

ಪಕ್ಕದಮನೆ ಲಲಿತ

ಪಕ್ಕದಮನೆ ಲಲಿತನಿಗೆ ಮದುವೆ ಅಂದಾಗ ನನಗಾದ ಸಂತೋಷ ಹೇಳ ತೀರದು. ಕುದುರೆ ಬೆಳೆದ ಹಾಗೆ ಬೆಳೆದು ನಿಂತ ಹೆಣ್ಣು. ಶಾಲೆಗೆ ಹೋಗುಲ್ಲ. ಸಂಗೀತ ಕಲಿತಿಲ್ಲ. ಆದರೂ ದಿನಬಿಟ್ಟು ದಿನ ನಮ್ಮನೆಗೆ ಬಂದು "ಅಕ್ಕಾ! ಅಮ್ಮ ಹೇಳಿದಳು ಕಮಲಕ್ಕನ ಮನೆಗೆಹೋಗಿ ಒಂದು ಬಟ್ಟಲು ಕಾಫಿಪುಡಿ ತೊಗೊಂಡು ಬಾ ಅಂತ" ಅಂತ ಹೇಳಿ ಕಾಫಿಪುಡಿ ತೆಗೆದುಕೊಂಡು ಹೋಗುತ್ತಿದ್ದಳು. ಬೆಳೆದ ಹುಡುಗಿ ಆಳುದ್ದ ಜೀವಾನ ಗೇಣುದ್ದ ಮಾಡಿಕೊಂಡು, ನನ್ನ ಕಾಲುಂಗುರ ನೋಡ್ತಾ ಹೀಗೆ ಬೆವರು ಸುರಿಸುತ್ತಾ ಕೇಳಿದರೆ ಹೇಗೆ ಇಲ್ಲಾ ಅನ್ನೋದು? ಮೂರು ಬಟ್ಟಲು ಕಾಫಿಪುಡಿ ಸಾಲ ಆಯ್ತು ಅಂತ ಹೇಗೆ ಹೇಳೋದು? ಅದಕ್ಕೂ ಹಿಂದೆ ಸಾಲತೆಗೆದು ಕೊಂಡ ಕಾಫೀಪುಡಿ ಬದಲು, ಚಿಕರಿಪುಡಿ ಸಾಲ ತೀರಿಸಿದ್ದನ್ನ ಹೇಗೆ ಈ ಮುಗ್ಧೆಗೆ ಹೇಳೋದು? ಈ ತೊಂಚಾವಂಚದಲ್ಲಿ ಅವಳು ತಂದ ಕಾಫಿ ಬಟ್ಟಲನಲ್ಲಿ ನಮ್ಮನೆ ಕಾಫಿ ಪುಡೀನ ತುಂಬಿ, ಅವಳ ಹಣೆಗೆ ಕುಂಕುಮ ಇರಿಸಿ ಕಳಿಸುತ್ತಿದ್ದೆ.

ಈಗ ಅವಳ ಮದುವೆ. ಅಂದರೆ ನಾಗೋಲಿಯಾದಮೇಲೆ ಗಂಡನ ಮನೆಗೆ ಹೋಗುತ್ತಾಳೆ. ಅಂದಮೇಲೆ ನಮ್ಮನೆಯಲ್ಲಿ ಕಾಫಿಪುಡಿ ಖರ್ಚು ಮುಕ್ಕಾಲು ಕಡಿಮೆ. ಅದಕ್ಕೇ ಅವಳ ಅಪ್ಪ ಅಮ್ಮನಿಗಿಂತ, ಗಂಡನಿಗಿಂತ, ಅವಳಿಗಿಂತ, ಅವಳ ಮಾವ, ಅತ್ತೆಗಿಂತ, ನನಗೆ ಬಲು ಖುಷಿ!

* * *

"ಲಲಿತನಿಗೆ ಮದುವೆ ಅಂತೆ! ನಮ್ಮ ಮನೆ ಹುಡುಗಿಯಂತೇನೇ ಅವಳು! ಏನು ಓದಿಸೋದು ಅಂದ್ರೆ" ಅಂದೆ ಯಜಮಾನರ ಹತ್ತಿರ, ವಾರಕ್ಕೆ ಮುಂಚೆ, ಘಮ ಘಮಿಸುವ ಕಾಫಿ ಕೊಟ್ಟಮೇಲೆ.

ಯಜಮಾನರಂದರು "ಅದನ್ನು ನನಗೆ ಬಿಡು ನಾನು ಸರಿಯಾದ ಮರೆಯು ಲಾಗದ ವಸ್ತುವನ್ನು, ನಮ್ಮ ಜ್ಞಾಪಕಾರ್ಥವಾಗಿ ಓದಿಸುತ್ತೇನೆ. ಇವಕ್ಕೆ ಹೆಂಗಸರ ಬುದ್ಧಿ ಸಾಕಾಗುಲ್ಲ" ಅಂತ.

ನಾನೂ ಪೆಚ್ಚಿ! ಗಂಡ ಪ್ರಚಂಡ, ಬಲು ಬುದ್ಧಿಶಾಲಿ, ಕಲ್ಲಿನಲ್ಲಿ ಹೊನ್ನು ಹಿಂಡುವಂತಹ ಶಹಣೆ ಜಾತಿ; ಅಂದ ಮೇಲೆ ಓದಿಸುವುದಕ್ಕೆ ಆಶೀರ್ವಾದ ಪೂರ್ವಕ

ಕೊಡುವ ವಸ್ತುವನ್ನು ಆತ ದಿಟವಾಗಲೂ ಲಕ್ಷಣವಾಗಿ ಮಾಡುತ್ತಾನೆ ಅಂತ ಅಂದು ಕೊಂಡೆ. ನನಗೆ ತೋಚಿದ್ದು ಒಂದು ಸೀರೆ-ಉಟ್ಟು ಹರಿದರೆ ವರ್ಷದಲ್ಲೇ ಅಳಿ ಯುತ್ತೆ. ಇಲ್ಲಾ ಒಂದು ಬೆಳ್ಳಿಲೋಟ! ಇನ್ನೊಬ್ಬರ ಮನೆ ಮದುವೆಗೆ ತ್ಯಾಗ ಹೋಗಲು ಸಿದ್ಧ. ಅಥವಾ ಒಂದು ಈಗಿನ ಕಾಲದ ಬುತ್ತಾ. ಅದನ್ನು ಹೊರಗೆ ತೋರಿಸಿಕೊಳ್ಳುವ ಸಾಹಸವೂ ಯಾವ ಹೆಣ್ಣಿಗೂ ಇರದು. ಇದೆಲ್ಲಕ್ಕಿಂತ ಜಾಣ ಗಂಡ ತೋಚಿದ್ದು ಮಾಡಲಿ ಎಂದು ನಾನೂ ಸುಮ್ಮಗಾದೆ.

*　　*　　*

ಮದುವೆಯ ದಿನ ಯಜಮಾನರು ಕಛೇರಿಗೆ ರಜಾ ತೆಗೆದುಕೊಂಡು, ಧಾರೆ ಹೊತ್ತಿಗೆ ನನ್ನೊಡನೆ ಮದುವೆ ಮನೆಯನ್ನು ಸೇರಿದರು. ಜರಿ ಜರಿ ಕಾಗದದಲ್ಲಿ ಸುತ್ತಿದ್ದ ವಸ್ತು ಕೈಲಿ. 'ಏನು ಅಂದ್ರೆ' ಅಂದರೆ ಹೇಳಲೊಲ್ಲರು. ಧಾರೆಯಾಯ್ತು. ಓದಿಸುವುದಕ್ಕೆ ಶುರುಮಾಡಿದರು ಪುರೋಹಿತರು. ನಮ್ಮ ಯಜಮಾನರು ಜರಿ ಜರಿ ಕಾಗದದ ವಸ್ತುವನ್ನು ಪುರೋಹಿತರಿಗೆ ನನ್ನ ಕೈಲಿ ಕೊಡಿಸಿದರು. ಓದಿಸಿದ ಶಾಸ್ತ್ರವೂ ಆಯಿತು. ಸಭಾಪೂಜೆ ಆಯಿತು ಫಲ ತಾಂಬೂಲ ತೆಗೆದುಕೊಂಡು ಮನೆಗೆ ಹಿಂತಿ ರುಗಿದೆವು.

*　　*　　*

"ನೋಡುಕ್ಕೇ ಆಗಲಿಲ್ಲ! ಏನೂ ಅಂದ್ರೆ ಓದಿಸಿದ್ದು!" ಅಂದೆ. ಅದೆಲ್ಲಾ ಯಾಕೆ? ಲಲಿತ ಮರೆಯಲಾರದಂತಹ ವಸ್ತುವನ್ನು ಕೊಟ್ಟಿದ್ದೇನೆ. ನಮ್ಮ ಜ್ಞಾಪಕ ಇದ್ದೇ ಇರುವಂತೆ ಮಾಡಿದ್ದೇನೆ. ಎಂದರು ಯಜಮಾನರು.

ಹೆಂಗಸಿಗೆ ತಿಳಿದ ಎಲ್ಲಾ ಚಾಣಾಕ್ಷತೆಯನ್ನೂ ಉಪಯೋಗಿಸಿದೆ. ಬಾಯಿ ಬಿಟ್ಟಿದ್ದರೆ ಯಜಮಾನರು!

*　　*　　*

ನಾಲ್ಕುದಿನ ಆದಮೇಲೆ, ಲಲಿತನ ತಾಯಿ ಅರಿಶಿನ ಕುಂಕುಮ ಕೊಡುಕ್ಕೆ ನಮ್ಮನೆಗೆ ಬಂದರು. ಅರಿಶಿನ ಕುಂಕುಮ ಒಂದು ಷಿಫಾನ್ ಕುಪ್ಪಸ ಕೊಟ್ಟರು ಲಲಿತ ನಾವು ಕೊಟ್ಟ ಉಡುಗೊರೆಯನ್ನೂ ಮರೆಯಲು ಸಾಧ್ಯವೇ ಇಲ್ಲ ಎಂದರು. ಹೋಗಿಬರುತ್ತೇನೆ ಎಂದು ಕುಂಕುಮ ಇಟ್ಟುಕೊಂಡು ಹೋದರು ಬಂದಾಗೆಲ್ಲಾ ನಗುತ್ತಿದ್ದ ಪ್ರಾಣಿ, ಬಾಯಿತುಂಬ ಮಾತಾಡುತ್ತಿದ್ದ ಪ್ರಾಣಿ, ಆ ಸಂಜೆ ಅವಾಕ್ಕು, ಆ ಸಾಯಂಕಾಲ ಸ್ವಯಂಭು!

ನನಗೆ ಆಗಲೇ ಕಸವಿಸಿ.

*　　*　　*

ರಾತ್ರಿ ಯಜಮಾನರನ್ನು ಕೇಳಿದೆ "ಓದಿಸಿದ್ದು ಏನು" ಎಂದು, ಊಟಕ್ಕೆ ಮೊದಲೇ! ಸಂಜೆ ಲಲಿತನ ಅಮ್ಮ ಬಂದು ಹೋದುದನ್ನೆಲ್ಲಾ ವಿವರಿಸಿದೆ. ಹೇಳದೇ ಇದ್ದರೆ ಊಟಇಲ್ಲ ಎಂದೂ ಖಂಡಿತವಾಗಿ ತೋರ್ಪಡಿಸಿದೆ.

ಅನ್ಯಾಯಕಾರ ಪ್ರಾಣಿ, ನಾನು ಕೈಹಿಡಿದ ಪ್ರಾಣಿ ಹೇಳಿತು.

"ಒಂದು ಬಟ್ಟಲಲ್ಲಿ ಘಮಘಮಿಸುವ ಕಾಫಿ ಪುಡಿಯನ್ನು ತುಂಬಿ, ಜರಿಕಾಗದ ಸುತ್ತಿ. ಓದಿಸಿದೆ, ನಮ್ಮ ಜ್ಞಾಪಕ ಸರ್ವಕಾಲ ಇರಲಿ" ಎಂದು.

"ಏನು ಬುದ್ಧಿ ಬಂತು ಅಂದ್ರೆ ನಿಮಗೆ! ವಯಸ್ಸಾದರೂ ಏಕೆ ಬಂತೋ!" ಎಂದು ಉದ್ಗಾರ ತೆಗೆದೆ.

"ದಿಟಕಣೆ! ನನಗೆ ಬುದ್ಧಿ ವ್ಯತ್ಯಾಸವಾಗಿತ್ತು. ವಯಸ್ಸು ಅರಳು ಮರುಳಾಗಿತ್ತು. ಆ ಚಿಕರಿಕಾಫಿ ಕುಡಿದೂ ಕುಡಿದೂ, ತರೋದೇನೋ ಸೊಗಸಾದ ಕಾಫಿ ಪುಡಿ, ಕುಡಿಯೋದೇನೇ ಹಳಸಿದ ಚಿಕರಿಪುಡಿ. ಸೇಡು ತೀರಿಸಿಕೊಂಡೆ ಹುಚ್ಚು ಹಿಡಿದಾಗ" ಎಂದರು.

* * *

ಎಲೆ ಹಾಕಿ ಊಟ ಬಡಿಸಿ "ಬನ್ನಿ ಅಂದ್ರೆ ಆರಿಹೋಗುತ್ತೆ" ಎಂದೆ

ಶ್ರೀಮತಿ ವಿಮ್ಲಾ

ಏನು, ಸ್ವಾಮಿ! ಕೂಸನ್ನೂ ಎತ್ತಿಕೊಂಡು ಎಲ್ಲಿಗೆ ಹೊರಟಿರಿ? ಆಸ್ಪತ್ರೆಗೋ?

ಇಲ್ಲ, ಇಲ್ಲ, ಆಸ್ಪತ್ರೆಯಲ್ಲೇ ಇರುವುದಕ್ಕಾಗಿ....

ಅಂದರೆ, ಅರ್ಥವಾಗಲಿಲ್ಲ.

ಅಂದರೆ, ಇವನಿಗೆ ಮೆಡಿಕಲ್ ಕಾಲೇಜಲ್ಲಿ ಒಂದು ಸೀಟು ಖಾತ್ರಿ ಮಾಡಿಕೊಳ್ಳುವುದಕ್ಕಾಗಿ, ಎತ್ತಿಕೊಂಡು ಹೋಗುತ್ತಿದೇನೆ....

ಶುಭಸ್ಯ ಶೀಘ್ರಂ........

ಜೂನ್-೧೯೫೪

“ಥೂ, ಅಯೋಗ್ಯ, ಕಾದಂಬರಿ ಬರೀತೀಯ, ಈ ಸಲವೂ ಮೂರು ಪಾರ್ಟೂ ಹೋಯ್ತಲ್ಲೋ. ಯಾರಯಾರಿಗೋ ಬತ್ತಿ ಇಡೋಕೆ ಹೋದೆ ಈಗ ನೋಡು ನಿನಗೇ ಬರೆ ಬಿತ್ತು. ಮೂತಿ ನೋಡ್ಕೊ, ಎಷ್ಟು ಲಕ್ಷಣವಾಗಿದೆ.... ತೀಡೋ ತೀಡೋ! ಕ್ರಾಪ್ನ .. ಮುಂಡೇದೆ, ಬ್ರಿಲಿಯಂಟೈನ್ ಹಚ್ಚಿಕೊಂಡ್ರೆ ಬುದ್ಧಿ ಬ್ರೈಟ್ ಆಯ್ತೆ? ಬುಷ್‌ಕೋಟ್ ಬೇರೆ ಅವಲಕ್ಷಣಕ್ಕೆ – ಶೇಕಡ ೩೦ರ ಯೋಗ್ಯತೆ ಇಲ್ಲದೆ ಹೋದರೂ....ಒಂದೇ ಸಮನೆ ಬಡುಕೊಂಡೆ, ಕೂತ್ಕೊಂಡು ಓದು ಅಂತ .. ಆ ದರಿದ್ರ ತಿರುನಾರಣಯ್ಯಂಗಾರಿ ಜೊತೇಲಿ ಗಾಯತ್ರಿ ಟಾಕೀಸ್ ಹಿಂದುಗಡೆ ಬೀಡಿ ಸೇದಿ “ಗ್ರೇಟೆಸ್ಟ್ ಷೋ ಆನ್ ಅರ್ತ್” ನೋಡೋಕೆ ಹೋದ್ಯಲ್ಲೋ ಆವತ್ತು— ಈಗ ನೋಡ್ಕೊ ನಿನ್ನ ದುರವಸ್ಥೇನ— “ಅಗ್ಲಿಯಸ್ಟ್ ಷೋ ಆನ್ ಅರ್ತ್”. ಯಾವತ್ತು, ನೋಡಿದ್ರೂ ಏನಾದರೊಂದು. ಎಂಗೇಜ್‌ಮೆಂಟ್ ಹಾಳಾದವನಿಗೆ— ಇವತ್ತೇನು ಅಂತರ್ ವಾರ್ಸಿಟಿ ಕುಸ್ತಿ—ಡಿಬೇಟು—ಮ್ಯಾಚು, ನಾಳೆ ಏನು? ಆಲ್ ಇಂಡಿಯ ವ್ರೈಟರ್ಸ್ ಕಾನ್‌ಫರೆನ್ಸ್, ಆಲ್ ಇಂಡಿಯ ಎಕ್ಸಿಬಿಷನ್— ಅಂತ ಪ್ರತಿನಿತ್ಯವೂ ಮನೇಲಿ ಪಿಂಡ ತಿಂದು ದಂಡ ತೆತ್ತಿದ ಕಾಲೇಜಿಗೆ!... ಜ್ಞಾನವಾಗಿ ಈಗಲಾದ್ರೂ ಎಚ್ಚೆತ್ತುಕೊಂಡು ಆ ಹಾಳು ಬುಷ್‌ಕೋಟ್ನ ಒಲೇಗೆ ಹಾಕಿ, ತಲೆ ಮಾಡಿಸಿಕೊಂಡು ವಿಭೂತಿ ಇಟ್ಕೋ.... ಓದುಕ್ಕೆ ಪ್ರಾರಂಭಮಾಡು.... ಯಾಕೋ ಹಾಗೆ ದುರುಗುಟ್ಟ್ಕೊಂಡು ನೋಡ್ತೀಯ.... ಥೂ ಬೇವರ್ಸಿ.... ತೊಲಗೋ ಆಚೆ.... ಮುಖ ತೋರಿಸಬೇಡ”— ಅಂತ ಇಂಟರ್‌ನಲ್ಲಿ ಮೂರನೆ ಸಾರಿಯೂ ನಪಾಸಾದ ಗೋವಿಂದು ಮನೆಗೆ ಬಂದವನೇ ತನ್ನ ಫೋಟೋ ಮುಂದೆ ನಿಂತುಕೊಂಡು ಬೈಯುತ್ತ ಫೋಟೋನ ರೊಯ್ಯನೆ ನೆಲದಮೇಲೆ ಕುಕ್ಕಿದ!

ಗೋವಿಂದುವನ್ನು ಹೆತ್ತ ತಂದೆ ತಾಯಿಗಳು ಇಷ್ಟನ್ನೂ ನೋಡುತ್ತಲೇ ಒಳ ಬಾಗಿಲು ಬಳಿಯೇ ನಿಂತಿದ್ದರು. ಫೋಟೋವನ್ನು ನೆಲದಮೇಲೆ ಕುಕ್ಕುತ್ತಲೇ ಗೋವಿಂದುವನ್ನು ಹಿಡಿದುಕೊಂಡು ತಲೇಗೆ ತಣ್ಣೀರು ತಟ್ಟಿ, ಕೈಗೆ ಅರಶಿನದ ಬಟ್ಟೆ ಕಟ್ಟಿ, ವೆಂಕಟರಮಣನಿಗೆ ರೂಪಾಯಿ ಮೀಸಲು ಕಟ್ಟಿ, ಮುಖಕ್ಕೆ ಬೂದಿಊದಿ, ನಿಂಬೇಹಣ್ಣಿನ ಪಾನಕಾನ ಹೊಟ್ಟೇಗೆ ಕುಡಿಸಿದರು. ಗೋವಿಂದು ತಣ್ಣಗೆ ಪಾನಕ ಕುಡಿದು ಕುರ್ಚಿಮೇಲೆ ಕಣ್ಣಾಲಿಗಳನ್ನಾಡಿಸುತ್ತ ಕೂತುಕೊಂಡ— “ನಾನೆಲ್ಲಿದೇನೆ

ಎನ್ನುವ ತರಹ". ಹೆತ್ತಕರುಳು ಪರಿತಪಿಸುತ್ತ ಗೋವಿಂದುವನ್ನು ಸಂತೈಸುತ್ತಿತ್ತು. ದುಡಿದ ಕರುಳು ಚುಳುಕ್ ಅಂದಿರಬೇಕು—ಅಂತೆಯೇ ಅವರು ತೋಡಿಕೊಂಡರು—"ಮೂರು ಪಾರ್ಟೂ ಹೋಯ್ತೇನೋ ಮಗನೆ ಅಂತ!" ಹೆತ್ತಕರುಳು ಅಂತೆಯೇ ಸಮಾಧಾನ ಹೇಳಿತು— "ಮಗೂನ ಏನೂ ಅನ್ನಬೇಡಿ ಅಂದ್ರೆ, ಇಷ್ಟೊತ್ತೂ ಕೇಳಿದ್ರೊ ಇಲ್ಲವೋ—ಅನ್ನೋದಕ್ಕೆ ನಿಮಗೆ ಏನು ಉಳಿದಿದೆ" ಅಂತ. ಉಳಿದಿರೋದನ್ನೇ ಅಂತೇನೆ ಕಣೆ ಅಂತ ಅವರು ಗೋವಿಂದು ಕಡೆ ತಿರುಗಿ "ಮುಂದಿನ ಪರೀಕ್ಷೆಗೆ ಅಪ್ಲಿಕೇಷನ್ ಕಳಿಸು. ದುಡ್ಡು ಎಷ್ಟು ಬೇಕು ಹೇಳು ಕೊಡ್ತೀನಿ" ಅಂದರು.

ಗೋವಿಂದು ಎದ್ದು ಹುಳಿತೊವ್ವೇಲಿ ಲಕ್ಷಣವಾಗಿ ಎರಡುಸಲ ಕಲಸಿಕೊಂಡು ಊಟಮಾಡಿ ಮೂರೂಕಾಲುಗೆಲ್ಲ ಮನೆಬಿಟ್ಟು ಹೊರಟ, ಮಾಟ್ನೀಗೆ!

ಗೋವಿಂದುವಿನ ಅನ್ಯೋನ್ಯ ಗೆಳೆಯ ಪುಟ್ಟರಾಜೂಗೂ ಮೂರು ಪಾರ್ಟೂ ಹೋಯ್ತು. ಅವನೂ ಅವತ್ತು ಅವರ ಮನೇಲಿ ಗೋವಿಂದ ಆಡಿದ ನಾಟಕಾನೇ ಆಡಿದ. ಅದೇ ಅವಾಚ್ಯ ಶಬ್ದಗಳು— ಕರುಳು ಹಿಂಡೋ ಭಾಷೆಯಲ್ಲಿ, ಇಬ್ಬರೂ ಒಟ್ಟಿಗೆ ಬರೆದುಕೊಂಡು ತಿಂಗಳಿಂದಲೂ ಗಟ್ಟಿಮಾಡಿಕೊಂಡಿದ್ದರು. ಪುಟ್ಟರಾಜು ತಂದೆ ಭಾರಿ ನಾಟಕದ ಕಂಪೆನಿ ಕಟ್ಟಿ ಪಾಪರ್ ಆದವರು. ಪುಟ್ಟರಾಜು ಸಿಕ್ಕಾಪಟ್ಟೆ ಹೊಗಳಿದ್ದನ್ನೂ, ಫೋಟೋನ ನೆಲಕ್ಕೆ ಕುಕ್ಕಿದ್ದನ್ನೂ ನೋಡಿ "ಬುದ್ಧಿ ನೆಟ್ಟಗಿದೆಯೋ ಇಲ್ಲವೋ, ಪೋಕರಿ" ಅಂತ ಉಗಿದು ಕತ್ತು ಹಿಡಿದು ಆಚೆಗೆ ದಬ್ಬಿ ಕೈಕೊಡವಿಕೊಂಡು, ಒಳಕ್ಕೆ ಹೋಗಿ ವೆಂಡಿಲೇಟರುಗಳನ್ನೆಲ್ಲ ಮುಚ್ಚಿ, ಒಂದು ಲೋಟ ಬಿಸಿ ಬಿಸಿ ಕಾಫಿ ಕುಡಿದು "ಸಿಲೋನ್" ತಿರಿಗಿಸಿಕೊಂಡರು.

—ಹಾ. ರಾ.

ರಾಷ್ಟ್ರೀಯ ಯೋಜನೆ ಸಾಲವನ್ನು ಭಾರತ ಸರ್ಕಾರ ಎತ್ತುವುದನ್ನೂ ನೋಡಿ, ನಮ್ಮ ನಾಣಿ ಸಂಸಾರ ಯೋಜನೆ ಸಾಲವನ್ನು ಬ್ಯಾಂಕಿನಲ್ಲಿ ಎತ್ತಲು ಪ್ರಯತ್ನಿಸುತ್ತಿದ್ದಾನೆ.

* * *

ರಾಷ್ಟ್ರಾಧ್ಯಕ್ಷರು ಪದ್ಮಭೂಷಣ್ ತಿಸ್ರಾವರ್ಗ್, ದಯಪಾಲಿಸಿದಂತೆ.
—ನಮ್ಮಾಫೀಸಿನಲ್ಲಿ ಕೂಡ ತಿಸ್ರಾ ಆದರೆ ವರ್ಗ ಖಂಡಿತ ಬಡನೌಕರನಿಗೆ,

* * *

ದಿನವೂ ನಡೆಯುವ ಸ್ಪರ್ಧೆ

ಪಾಕಿಸ್ತಾನದಲ್ಲಿ, ಮೊನ್ನೆ, ಒಂದು "ಬುರುಡೆ ಹೊಡೆಯುವ ಸ್ಪರ್ಧೆ"ಯನ್ನು ಏರ್ಪಡಿಸಿದ್ದರಂತೆ, ಯಾರೂ ನಂಬಲಾರದ ಕಥೆಯೊಂದನ್ನು ನಂಬುವಂತೆ ಹೇಳಿದ ಮಹನೀಯರೊಬ್ಬರಿಗೆ ಮೊದಲನೆಯ ಬಹುಮಾನವನ್ನು ಕೊಟ್ಟರಂತೆ.

ನಾನು ಕಂಡ ಹಾಗೆ, ಇಂಥ ಸ್ಪರ್ಧೆ ದಿನವೂ ನಡೆಯುತ್ತಿದೆ, ಕೋರ್ಟು ಕಚೇರಿಗಳಲ್ಲಿ, ವ್ಯವಹಾರಗಳಲ್ಲಿ, ವಾರ್ಷಿಕ ವರದಿಗಳಲ್ಲಿ, ಯೋಜನಾವಿವರಣೆಗಳಲ್ಲಿ, ರಜಾ ಚೀಟಿಗಳಲ್ಲಿ, ಗಂಡಂದಿರ ತಪ್ಪೊಪ್ಪುವಿಕೆಗಳಲ್ಲಿ, ವಿದ್ಯಾರ್ಥಿಗಳು ಊರಿಗೆ ಬರೆಯುವ ಪತ್ರಗಳಲ್ಲಿ, ಪ್ರತಿನಿಧಿಗಳ ಭಾಷಣಗಳಲ್ಲಿ, ಕಂಪನಿಗಳ ವಾರ್ಷಿಕ ಲೆಕ್ಕ ಪತ್ರಗಳಲ್ಲಿ .... ಅತ್ಯಂತ ಸಮಂಜಸವಾದ ಸುಳ್ಳು ಹೇಳುವ ವ್ಯಕ್ತಿಗಳಿಗೆ ಫೀಜು ವಜಾ, ಸ್ಕಾಲರ್ಷಿಪ್ ಹಣ, ನೌಕರಿ, ಬಡ್ತಿ, ವರ್ಗ ಕ್ಯಾನ್ಸಲ್ ಮಾಡುವ ಆರ್ಡರುಗಳು, ಲಾಭ, ಮೆಚ್ಚುಗೆ, ಬಿರುದು, ಮೇಲಿನವರ ಹಸ್ತಸ್ಪರ್ಶ, ಹಾರ ತುರಾಯಿ, ಅಗ್ರ ಪೂಜೆ....ದೊರೆಯುತ್ತಲೇ ಇದೆ ಸುಳ್ಳಿಗೆ ಮನ್ನಣೆ, ಸತ್ಯಕ್ಕೆ ಉಚ್ಚಾಟನೆ!

ಇದರಿಂದ ನಮ್ಮಲ್ಲಿ ಎಂಥ ಅಸತ್ಯವಾತಾವರಣವುಂಟಾಗಿದೆ ಎಂದರೆ, ಎಷ್ಟೇ ಪ್ರಾಮಾಣಿಕತನದಿಂದ ನಾವು ವಿಷಯವನ್ನು ಪ್ರತಿಪಾದಿಸಿದರೂ, "ಛೆ! ಸುಳ್ಳಿರಬೇಕು," ಎಂದು ಜನರು ಅದನ್ನು ಅವಹೇಳನಮಾಡಲು ಹತ್ತಿದಾರೆ.

ಮೊನ್ನೆ ನಾನು 'ಜೋಗ್'ನಲ್ಲಿ ಒಂದು ತಮಾಷೆ ನೋಡಿದೆ. "ರೋರರ್" ಎಂಬ ಆ ಜಲಪಾತದ ಮೂಲಕ ಗುಂಡಿಯಿಂದ ಒಂದು ಮೀನು ಮೇಲು ಮೇಲಕ್ಕೆ ಈಜಿ ಬಂತು. ಹೇಳಿದರೆ, ಒಬ್ಬರೂ ನಂಬುವುದಿಲ್ಲ, ಕಣ್ಣಾರ ಕಂಡ ಸಮಾಚಾರ. ತುಲಾಸಂಕ್ರಮಣದ ದಿನ ರಾತ್ರಿ ೧೨ ಗಂಟೆಗೆ ಇಡೀ ಕಾವೇರಿನದಿ ಒಂದು ನಿಮಿಷ ನಿಂತು, ಮತ್ತೆ ಮುಂದಕ್ಕೆ ಹರಿಯುತ್ತದೆ ಅಂದರೆ ನಂಬುತ್ತೀರಾ? ನಾನು ನಂಬುತ್ತೇನೆ ಏಕೆಂದರೆ, ನಾನು ನೋಡಿದೇನೆ. ಕರಡಿಗಳು ಹಲಸಿನ ತೊಳೆಯನ್ನೂ ಜೇನು ತುಪ್ಪವನ್ನೂ ಕಲಸಿ, ಬಂಡೆ ಮೇಲಿರಿಸಿ, ಗುಂಡುಕಲ್ಲಿಂದ ಅರೆದು, ಉಂಡೆಮಾಡಿ ನುಂಗುವುದನ್ನಂತೂ ನೀವು ನಂಬಿದೀರಿ. ಆದರೆ, ಹೊಸದುರ್ಗದ ಹತ್ತಿರದ ಕರಡಿಗಳು, ಸಕಲೇಶಪುರದಿಂದ ಏಲಕ್ಕಿ ತರಿಸಿ, ಅದನ್ನೂ ಪುಡಿಮಾಡಿ ಬೆರೆಸುತ್ತವೆ, ಎಂಬುದು ನಿಜ. ನನಗೆ ಒಬ್ಬರು ಹೇಳಿದ್ದು; ತೀರಾ ನಂಬಿಕಸ್ಥರು. ಹಾಗೆಯೇ, ತರೀಕೆರೆ ಹತ್ತಿರ ಒಬ್ಬ ಮಲಯಾಳಿ ಗರಗಸದವನು ಪೈಪೋಟಿಗಾಗಿ ಮರದ ದಿಮ್ಮಿ ಕುಯ್ಯುತ್ತ ಕುಯ್ಯುತ್ತ, ೨೪ ಅಡಿ ಉದ್ದದ ದಿಮ್ಮಿಯನ್ನು ಕುಯ್ದು ಕುಯ್ದು, ಆ ಅತೀರೇಕದ ಅಮಲಿನಲ್ಲಿ ೩೨ ಅಡಿ ತನಕ ಮುಂದುವರಿದು, ಅಷ್ಟೇ ಉದ್ದದ ಹಲಗೆಗಳನ್ನು ತಯಾರು ಮಾಡಿದ.

ಮೊನ್ನೆ, ನಮ್ಮೂರಿನ ಹತ್ತಿರ ಬಿರುಗಾಳಿ ಎದ್ದಾಗ, ಒಂದು ಮಗು ಆಕಾಶಕ್ಕೆ ಎದ್ದು ಬಿಡಲಿಲ್ಲವೆ? ಅದು ಕೆಳಕ್ಕೆ ಬಿದ್ದಾಗ, ಏನು ಹೇಳಿತು, ಗೊತ್ತೆ? ದೂರದಲ್ಲಿ ಒಂದು ಭಾರಿ ಬೆಟ್ಟನೋಡಿದೆ, ಅದರ ಮೇಲೆ, ಇಬ್ಬರು ಆಳು ಮೂರು ಬಾವುಟ ನೆಡುತ್ತಿದ್ದರು, ಅಂತ....ತೇನ್‌ಸಿಂಗ್ ಹಿಲಾರಿ ಇರಬೇಕು.

ಗರಾಜಿನ ಕಡೆಗೆ ಬರುವಾಗ ಕಾರಿಗೆ ಎಷ್ಟು ಪೆಟ್ರೋಲ್ ಬೇಕು, ಗರಾಜಿಂದ ಆಚೆ ಹೋಗುವಾಗ, ಎಷ್ಟು, ಅಂತ ಲೆಕ್ಕ ಹಾಕಿದರೇನು? ನಾನು ಹಾಕಿ ನೋಡಿದೇನೆ. ಕುದುರೆಗಳು ಮನೆಕಡೆ ಸಲೀಸಾಗಿ ಬರೀ ಹೊಟ್ಟೆಯಲ್ಲೇ ಓಡುವ ಹಾಗೆ, ಕಾರುಗಳೂ ಮಾಡುತ್ತವೆ ಮೈಲೊಂದಕ್ಕೆ ಎರಡು ಚಮಚ ಪೆಟ್ರೋಲ್ ಕಡಮೆ, ಸಾಕು. ಆದರೊಂದು;-ನೀಲೀ ಬಣ್ಣದ ಕಾರುಗಳಿಗೆ ಮಾತ್ರ ಹೀಗೆ.

ಅಮೀಲ್ದಾರ್ ಗಿರಿಗೆ ಏರಿದ ಕೂಡಲೇ, ಮೂರು ತಿಂಗಳ ಕಾಲ ಹಾರಾಡಿದರು, ಒಬ್ಬರು ಧಾಂಡಿಗರು! .. ನಂಬಿದರೆ ನಂಬಿ, ಬಿಟ್ಟರೆ ಬಿಡಿ. ನೀರಲ್ಲಿ ಮುಳುಗಿದವರನ್ನು ಕೇಳಿದೀರಿ, ನೋಡಿದೀರಿ. ಆದರೆ, ಹಣದಲ್ಲಿ ಮುಳುಗಿದವರನ್ನು ನಾನು ನೋಡಿದೇನೆ. ರಾತ್ರಿಕಂಡ ಬಾವಿಗೆ ಹಗಲು ಬಿದ್ದರು ಒಬ್ಬರು. ಕೋಲುಹಿಡಿದು ಮೂರು ಮೈಲಿ ನಡೆಯುವವರಿದಾರೆ, ಅಲ್ಲವೆ? ಶಂಕರಾಭರಣ ರಾಗ ಹಿಡಿದುಕೊಂಡು ಅಷ್ಟೇದೂರ ನಡೀತಾರೆ, ನನ್ನ ಸ್ನೇಹಿತರೊಬ್ಬರು.

ಅಬದ್ಧಕ್ಕೆ ಅಪ್ಪಣೆ ಕೊಟ್ಟರೆ, ನಾವೇನು ಯಾರಿಗೂ ತಲೆ ತಗ್ಗಿಸಬೇಕಾಗಿಲ್ಲ,....ಕ್ಷೌರಕನೊಬ್ಬನನ್ನುಳಿದು.

ಸುಳ್ಳು ಕತೆಗಳಿಗೆ ಬಹುಮಾನ ಹಂಚುವುದಾದರೆ, ಶಾಲಾಹುಡುಗರಿಗೆಲ್ಲ ಕೊಡಬೇಕಾಗುತ್ತದೆ; ಮಾಸ್ತರುಗಳಿಗೆಲ್ಲ ಕೊಡಬೇಕಾಗುತ್ತದೆ. ವಾದಿಗೂ ಕೊಡಬೇಕು, ಪ್ರತಿವಾದಿಗೂ ಕೊಡಬೇಕು. ಲಾಯರುಗಳಂತೂ ಬಹುಮಾನಗಳನ್ನು ಬಾಚಿಕೊಂಡು ಹೋಗುತ್ತಾರೆ.

ರೇವಣ್ಣ.

ಅಂಗಡಿ ನಿವೇಶನಗಳು ಹರಾಜು. (ಪ್ರಕಟಣೆ)
—ಅಂಗಡಿಗಳೇ ಹರಾಜಾಗುತ್ತಿವೆ! ಈ ಪ್ರಕಟಣೆ ಯಾರಿಗೆ ಬೇಕು?

* * *

ಮುಖ್ಯಮಂತ್ರಿಗಳ ಮೇಲೆ ಕೈಮಾಡಿದ ಆಪಾದನೆ.
ರಾಜಕೀಯದಲ್ಲಿ ಭಿನ್ನಾಭಿಪ್ರಾಯ.
ಪಕ್ಕ ಪಕ್ಕದ ಶಿರೋನಾಮೆಗಳು.

* * *

ಗಂಡೋ ಹೆಣ್ಣೋ?

ಬಸುರಿನಲ್ಲಿರುವುದು ಗಂಡೋ ಹೆಣ್ಣೋ? ಮೊದಲೇ ತಿಳಿಯುವಂತಾದರೆ, ಕುಲಾವಿ ಹೊಲೆಯಬಹುದು, ಹೆಸರು ನಿರ್ಧರಿಸಬಹುದು, ಒಡವೆ ಮಾಡಿಸಬಹುದು. ವರ ಹುಡುಕಿ ಮಾತುಕತೆ ಪ್ರಾರಂಭಿಸಬಹುದು.

ವೈದ್ಯರೂ ಜ್ಯೋತಿಷದವರೂ ಈ ಸಮಸ್ಯೆಯನ್ನು ಬಿಡಿಸಲು ಶತ ಶತಮಾನಗಳಿಂದ ಪ್ರಯತ್ನಿಸುತ್ತಿದ್ದಾರೆ.

ಆದರೆ, ಸೆನ್‌ಸಸ್ ಲೆಕ್ಕಗಳನ್ನು ಪರಿಶೀಲಿಸಿದರೆ, ಕೊಂಚ ಬೆಳಕು ಬೀರಬಹುದೆಂದು ನಾನು ಕಂಡು ಹಿಡಿದಿದೇನೆ. ೧೯೫೧ರ ಸೆನ್‌ಸಸ್ ಪ್ರಕಾರ, ನಗರವಾಸಿಗಳಿಗೂ. ೩೦ನ್ನು ಮೀರಿದ ಗಂಡು ೨೫ನ್ನು ಮೀರಿದ ಹೆಣ್ಣು— ಈ ದಂಪತಿಗಳಿಗೂ, ಎರಡನೆಯ ಗ್ರೇಡು ಗುಮಾಸ್ತೆಯರಿಗೂ, ಗಂಡು ಮಕ್ಕಳಿಗಿಂತ ಹೆಣ್ಣುಸಂತತಿ ಹೆಚ್ಚು ಎಂಬುದು ಹೊರಬಿದ್ದಿದೆ.

ಆದರೆ, ಇಷ್ಟು ಮಾತ್ರದಿಂದ ತಂದೆ ತಾಯಿಗಳ ತಾಪತ್ರಯ ತೀರುವಂತಿಲ್ಲ. ನಗರವಾಸಿಗಳಲ್ಲಿ ಯಾರಿಗೆ ಹೆಚ್ಚು? ಮಹಡಿವಾಸಿಗಳೆ? ಔಟ್ ಹೌಸ್ ವಾಸಿಗಳೆ? ಸತ್ಯವಂತರಿಗೆ? ಮೋಸಗಾರರಿಗೆ? ಸ್ವತಃ ಕಾರ್‌ಡ್ರೈವ್ ಮಾಡುವವರೆ? ಸಂಬಳಕ್ಕೆ ಡ್ರೈವರ್‌ಗಳನ್ನಿರಿಸಿ ಕೊಂಡಿರುವವರಿಗೆ? ಸಾಲವಂತರಿಗೆ? ಶೀಲವಂತರಿಗೆ? ಟೂರಿಂಗ್ ಆಫೀಸರುಗಳಿಗೆ? .. ...ಹೀಗೆ, ಲೆಕ್ಕಗಳನ್ನು ಪುನಃ ಪರಿಶೀಲಿಸ ಬೇಕಾಗುತ್ತದೆ.

ಹೀಗೆ, ಸೆನ್‌ಸಸ್ ಲೆಕ್ಕಗಳನ್ನು ಪರೀಕ್ಷಿಸಿದರೆ, ವ್ಯವಸಾಯ ಇಲಾಖೆ ಗುಮಾಸ್ತರಿಗೆ ಗಂಡು ಹೆಚ್ಚು; ಅರಣ್ಯ ಇಲಾಖೆ ಗುಮಾಸ್ತೆಯರಿಗೆ ಹೆಣ್ಣು ಹೆಚ್ಚು, ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ, ವಿದ್ಯಾ ಇಲಾಖೆ ಗುಮಾಸ್ತೆಯರಿಗೆ ಅವುಳಿ ಜವುಳಿ ಒಂದು ಹೆಣ್ಣು—ಒಂದು ಗಂಡು ಸಾಮಾನ್ಯದ ಅನುಭವ. ಅಂದರೆ, ತಾವು ತಿರುವಿಹಾಕುವ ಕಾಗದ ಪತ್ರಗಳ ವಿಷಯಕ್ಕೂ ತಮಗಾಗುವ ಸಂತತಿಯ ಲಿಂಗಕ್ಕೂ ಹೇಗೋ ಸಂಬಂಧ ಕಲ್ಪನೆಯಾಗುತ್ತದೆ, ಎಂದು ಊಹಿಸಬಹುದಾಗಿದೆ.

ಅಂಕಿ ಅಂಶಗಳನ್ನು ಮತ್ತಷ್ಟು ವಿವರವಾಗಿ ಪರೀಕ್ಷಿಸಿದರೆ, ರೇಂಜರುಗಳಿಗಿಂತ ಫಾರೆಸ್ಟರುಗಳಿಗೆ ಹೆಣ್ಣುಮಕ್ಕಳು ಹೆಚ್ಚು. ಮಲೆನಾಡಿಗಿಂತ ಮೈದಾನದಲ್ಲಿ ಹೆಣ್ಣು ಹೆಚ್ಚು, ವರ್ಷವೊಂದಕ್ಕೆ ೧೯ ಅಂಗುಲ ಮಳೆ ಬೀಳುವ ಪ್ರದೇಶದಲ್ಲಿ ಹೆಣ್ಣು ಸಂತತಿ ಇನ್ನೂ ಹೆಚ್ಚು.

ಅಂದರೆ, ನಿಮಗೂ ಅರಣ್ಯಕ್ಕೂ ಸಂಬಂಧವಿದ್ದು, ನಿಮ್ಮ ವಯಸ್ಸು ೩೩ ನಿಮ್ಮ ವರ ವಯಸ್ಸು ೨೯ ಆದರೆ, ನೀವು ನಿರೀಕ್ಷಿಸುತ್ತಿರುವ ಕೂಸು ಬಹುಶಃ ಹೆಣ್ಣು.

ಶ್ರೀ ಕೇಸರಿ.

ಕಾವ್ಯಸ್ಯಾತ್ಮಾ-ಧ್ವನಿರಿತಿ

'ಕಾವ್ಯಸ್ಯಾತ್ಮಾ ಧ್ವನಿರಿತಿ' ಎಂದು ಹಳೆಯ ಆನಂದ ವರ್ಧಕ ಹೇಳಿದುದನ್ನೇ ಮೊನ್ನೆ ಲೇಖನಿ (P. E. N)ಯಲ್ಲಿ, 'ಪದಕ್ಕಿಂತ ಸ್ಫೂರ್ತಿಯೇ ಮುಖ್ಯ' ಎಂದು ಹೊಸ ನೆಹರೂ ಹೇಳಿದ. ಹಾಗೆ ಹೇಳುವುದರಿಂದ ಏನೂ ಪ್ರಯೋಜನವಿಲ್ಲವೆಂದೇ ನನ್ನ ಅಭಿಪ್ರಾಯ. ಏಕೆಂದರೆ ನಮ್ಮ ನಾಡಿನ ಜನರೆಲ್ಲರಿಗೂ ಧ್ವನಿತತ್ವ ರಕ್ತಗತವಾಗಿ ಬಂದುದು. ಪತ್ರಿಕೋದ್ಯಮಿಗಳು ರಾಜಕಾರಣಿಗಳು, ಇದರಲ್ಲಿ ಸಿದ್ಧಹಸ್ತರು. ಇವರೆದುರಿನಲ್ಲಿ ಕಾಳಿದಾಸ, ಬೇಂದ್ರೆಯಾದಿಗಳು ರಂಗನು ಸಿಂಗನ ಮುಂದೆ ನಿಲ್ಲುವುದೇ ಎಂದು ಓಡಿಹೋಗಿ ಮೂಲೆ ಮುಂಗಟ್ಟುಗಳನ್ನು ಸೇರಬೇಕಾದೀತು. ಇದೇನು ನಿನ್ನ ಹೊಸಕಾವ್ಯ ಮೀಸೆ ಎನ್ನಬೇಡಿ ನೋಡಿ ನನ್ನ ನವ್ಯ ರಸಧ್ವನಿಯ ಮೀಮಾಂಸೆಯನ್ನು.

ಒಬ್ಬ ರಾಜಕಾರಣಿ 'ದೇಶ ನಂದನ ವನವಾಗಬೇಕು' ಹಾಗೆ ಮಾಡುವುದು ನಮ್ಮೆಲ್ಲರ (ಸ್ವಗತ:–ನನ್ನೊಬ್ಬನನ್ನು ಬಿಟ್ಟು) ಆದ್ಯಕರ್ತವ್ಯ. ಬಡತನ ರೋಗ ರುಜಿನಗಳು ಕೊನೆಗಾಣಲಿ. ಅಹಿಂಸೆಗಾಗಿ ಶಾಂತಿಯಿಂದ ಕ್ರಾಂತಿಯನ್ನೆಬ್ಬಿಸೋಣ ಎಂದು ಭಾಷಣ ಮಾಡುತ್ತಿರುವನೆಂದಿಟ್ಟುಕೊಳ್ಳೋಣ. ಇಲ್ಲಿ ಬರುವ ಪದಗಳೆಲ್ಲವೂ ಸರ್ವಸಾಮಾನ್ಯವಾದುವು; ಭಾವಚರ್ವಿತ ಚರ್ವಣ; ಇದಕ್ಕೆ ಬೆಲೆಯೇ ಇಲ್ಲ; ಎಂದು ನಮ್ಮೆಲ್ಲರಿಗೂ ತಿಳಿದಿದೆ. ಆದರೆ ಅದರ ಹಿಂದಿರುವ ಸ್ಫೂರ್ತಿಯನ್ನು ನಮನಿಸಿ. ಆಗ ಆ ರಾಜಕಾರಣಿಯ ಮನೋರಂಗದಲ್ಲಿ ನಡೆಯುತ್ತಿರುವ ಅದ್ಭುತನಾಟಕ (ಅದು ದುರಂತವೋ ಸುಖಾಂತವೋ ಆ ಸುದ್ದಿ ಬೇಡ) ನಿಮ್ಮ ಜ್ಞಾನ ಚಕ್ಷುವಿಗೆ ಗೋಚರಿಸುವುದು. ಭಾಷಣದ ಭೀಷಣ ಧ್ವನಿತಾರ್ಥ ಇದು:—'ನನ್ನನ್ನು ಚುನಾಯಿಸಿರಿ. ನನ್ನ ಪ್ರತಿಸ್ಪರ್ಧಿಯ ಠೇವಣಾತಿ ಹಾರಿಹೋಗಲಿ ನಾನು M. L. A ಆಗುವೆ. ಮಂತ್ರಿಮಂಡಲದ ಮುಖ್ಯನಾಗುವ ಛಾನ್ಸೂ ಇದೆ. ಆಗ ಹಡಗನ್ನು ನುಂಗದೆ ಬಿಡುವೆನೇ. ಸಭಿಕ ಸಭ್ಯರೇ ತೆರಿಗೆಗಳ ಭಾರವನ್ನು ಹೊರಲು ಸಿದ್ಧರಾಗಿ.'

ಒಬ್ಬ ನವ್ಯಕವಿ: 'ಕಿಟಕಿಯಾಚೆ ಕಂಬ ಕೆಳಗೆ
ನಿಂತವೆರಡು ಕತ್ತೆ
ಆವಾರಾ ಹೂಂ; ಆಂಡೀಸಿನ ಶಿಖರ
ಸುರಿಯಲಿ ಜ್ವಾಲಾಮುಖಿ'

ಎಂಬ ನವ್ಯಚಾಪದಿ ಬರೆದಿದ್ದಾನೆ ಎಂದರೆ ಅದರ ಧ್ವನಿತಾರ್ಥ, ಹೀಗೆ ಮಾಡಿದರೆ ಸೂಕ್ತವಾದೀತು. ನವ್ಯಕಾವ್ಯ ಬರೆಯದವರೆಲ್ಲಾ ಕತ್ತೆಗಳು ಏಕೆಂದರೆ ನಾನು ಇಂದು ಆವಾರ ಆಗಿದ್ದರೂ, ನಾಳೆ ಇಲಿಯಟ್ಟನಂತೆ ಕೀರ್ತಿ ಶಿಖರಕ್ಕೇರುತ್ತೇನೆ. ಆಗ ನನ್ನ ಮುಖ ಜ್ವಾಲಾಮಯವಾಗಿ ಲೋಕವನ್ನೇ ಕ್ರಾಂತಿ ಕುಂಡಕ್ಕೆ ಸುರಿಯುವುದು.

ಒಬ್ಬ ಉಪಾಧ್ಯಾಯರು ಹುಡುಗನನ್ನು 'ಅಲೆಗ್ಸಾಂಡರನು ದಂಡಯಾತ್ರೆಯನ್ನೇಕೆ ಮಾಡಿದನು?' ಎಂದು ಕೇಳಿದರೆ ಅದರ ಅಂತರಾರ್ಥ ಹೀಗೆ "ತಮ್ಮಣ್ಣಾ, ನಿನಗೂ ದಂಡೆಯಾತ್ರೆ ಮಾಡುವ ಇಚ್ಛೆ ಇದೆಯೋ? ಇನ್ನು ನಾಲ್ಕು ವರ್ಷ ಇಲ್ಲೇ ಇರುವೆ. ಆದರೆ ಬಚ್ಚಾ ಹಾಗೆ ಆಗದಿರಲು ಮಾರ್ಗವಿದೆ. ಏಳು! ಟ್ಯೂಷನ್ನಿಗೆ ಬಾ."

ಪತ್ರಿಕೆಗಳ ಅಗ್ರಲೇಖನಗಳು ಏನೇ ಆಗಿರಲಿ, ಎಷ್ಟೇ ವೈವಿಧ್ಯತೆಯಿಂದ ಕೂಡಿರಲಿ. ಉದಾಹರಣೆಗೆ.

'ಅಮೆರಿಕಾ H. ಬಾಂಬ್ ಪ್ರಯೋಗ ನಡೆಸಿತು'
'ರಷ್ಯಾದ ಸೈನಿಕ ಬಲ ಎಷ್ಟಿರಬಹುದು'
'ಡೀರ್ ಬೀರ್ ಫೂನ ಸುತ್ತಲೂ ಹೆಣದ ಬಣಿವೆ.'
'ಶಾಂತಿ ಸಮ್ಮೇಲನ' 'ಮಂಕದರು ಶತಕ ಸಾಧಿಸಿದರು'
'ಹಣಮಂತ ರಾಯರು ಡಿಲ್ಲಿಗೆ ಹಾರಿದರು.'

ಎಂದು ಏನಾದರೂ ಅಚ್ಚು ಹಾಕಿರಲಿ. ಅವುಗಳ ಗುಪ್ತಾರ್ಥ ಇಷ್ಟೇ 'ನಮ್ಮ ಪೇಪರನ್ನು ಕೊಂಡು ನಮ್ಮ ಕಿಸೆ ತುಂಬಿಸಿರಿ.'

ಶಾನುಭೋಗರು ರೈತರಿಗೆ 'ಅಮಲದಾರರು ಬಹಳ ಸ್ಟ್ರಿಕ್ಟು. ಕ್ಲಾರ್ಕುಗಳೆಲ್ಲಾ ಹೊಸಬರು. ಆವರ ಹತ್ತಿರ ನವನೀತಕ್ರಿಯೆ ನಡೆಯದು. ಕೆಲಸವಾಗುವುದು ಕಷ್ಟ' ಎಂದು ಹೇಳಿದರೆ ಅದರರ್ಥ ಹಾಗಲ್ಲ; ಹೀಗೆ: 'ಎಲವೆಲವೋ ನರಿ, ನೀನು ಸುಗ್ಗಿಯಲ್ಲಿ ದುಡಿದುದನ್ನೆಲ್ಲಾ ಇಲ್ಲಿಸುರಿ. ಕರತಲಾಮಲಕವಿಲ್ಲದೆ ನಿನಗೆ ಮುಕ್ತಿ ಇಲ್ಲ'

ಸಲಹಾಸಮಿತಿಯ ಅಧ್ಯಕ್ಷರು 'ಸಾಕುಮಾಡೋ ಜನ್ಮ ಸಾಕುಮಾಡೋ' ಎಂದು ಹಾಡುಹೇಳಿದುದನ್ನು ಕೇಳಿದಾಗ, ನೀವು ಅವರಿಗೆ ವೈರಾಗ್ಯ ಬಂದಿದೆಯೆಂದು ತಿಳಿಯದಿರಿ. ಅದು ಅಂದರೆ ಆ ಹಾಡು ಸಮಿತಿಯ ಸದಸ್ಯರ ಜನ್ಮವನ್ನು ಕುರಿತು ಹೇಳಿದುದು ಎಂದರಿಯಲು ಮರೆಯದಿರಿ. ಅಲ್ಲದೆ, ಶ್ರೀಮರ್ಾಕ್ಷರವರು ಚಿಂತಾಜನಕ ಸ್ಥಿತಿಯಲ್ಲಿದ್ದಾರೆ ಎಂಬ ಸುದ್ದಿಯು ಶ್ರೀಮರ್ಾಕ್ಷರವರ ಶೋಚನೀಯ ನಿಧನವನ್ನು ಕುರಿತದ್ದು ಎಂಬುದಕ್ಕೆ ಯಾವ ಸಂದೇಹವೂ ಬೇಡ.

ಕಲಾ ಮಹೋತ್ಸವ, ನಾಟಕಾಭಿನಯ, ಅನಾಥಾಲಯ, ದೈವಸೇವೆ, ಹರಿಕಥೆಗಳು ಜರುಗುತ್ತವೆ ಎಂದು ಅವುಗಳ ಕಾರ್ಯದರ್ಶಿ ಹೇಳಿದರೆ ನಿಮ್ಮ ಜೇಬಿಗೆ ಕತ್ತರಿ ಎಂಬರ್ಥ ಮಾಡಿಕೊಳ್ಳುವುದೇ ಒಳ್ಳೆಯದು.

ಹೀಗಿರುವಲ್ಲಿ 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣಾತ ಮತಿ' ಗಳಾದ ನಮಗೆ ಇವರೆಲ್ಲಾ ಧ್ವನಿತತ್ವ ಬೋಧಿಸಲು ಬರುವರಲ್ಲಾ ಇವರ ಗೂಢಾರ್ಥ ವೇನಿದ್ದೀತು?

—ಅ. ರಾ. ಸೇ.

ಮನೆ ಮಾಲೀಕ

ಹಾಸಿಗೆಯಿಂದಿಳಿದು ಓಡಾಡಲಾರ
ಏನೆಂದರೊಂದನೂ ಮಾತಾಡಲಾರ
ಪೆನ್ನ ಹಿಡಿದೇನನೂ ಬರೆಯಲಾರ
ತನ್ನ ಬಟ್ಟೆಯ ತಾನು ಉಡಲಾರನೋ

ಕಿಸೆಇಲ್ಲ, ಪರ್ಸಿಲ್ಲ, ಸ್ವತ್ತಿಲ್ಲ, ಕಾಸಿಲ್ಲ,
ಆದರೂ, ಈ ಮನೆಗೆ ಮಾಲೀಕನವನೇ!
ಕೂಗೊಂದ ಹಾಕಿದರೆ ಹೆದರದವರಿಲ್ಲ
ಅವನ ಮಂದಸ್ಮಿತಕೆ ಕಾಯುವರು, ಎಲ್ಲ.

ಅವನ ಬಾಯಿ ತೆರೆದರೆ ಬೆಚ್ಚುವರು ಎಲ್ಲ
ರೇಗೊಂದೆ ಸಾಕವಗೆ, ದೊರೆಯುವುದು, ಎಲ್ಲ
ತಲೆಯ ಮೇಲೇರುವನು, ಕಿವಿಎಳೆಯ ಬಲ್ಲ
ಕಾಲಿಂದ ಒದೆಯುವನು ಕೆನ್ನೆಗೇಟು!

ಆದರೂ ಅವನನ್ನು ಶಿಕ್ಷಿಸಲು ಒಬ್ಬರಿಗು
ಮನವಿಲ್ಲ, ಮತ್ತವಗೆ, ಎದೆಗಪ್ಪು, ಮುದ್ದು!
ಅವನದೇ ಆಡಳಿತ, ಹಗಲಿರುಳು, ರಾಜ
ಮನೆಒಳಗೆ ಮನೆಹೊರಗೆ ಅವನದೇ ಮೋಜು!

ಮೂರು ತಿಂಗಳ ಕೂಸು, ಮೂಗೊಂದು ಮುದ್ದೆ
ಆದರೂ ಅವಗಾಗಿ ಎರಡಾಳು ಸಿದ್ಧ
ಅವನಿಚ್ಛೆ ನಮ್ಮಿಚ್ಛೆ; ಅವನ ಮನ ನೊಂದರೆ
ನಮ್ಮ ಬದುಕೇ ವ್ಯರ್ಥ, ಅವನೆ ದೇವ!

ಶ್ರೀಮತಿ ಕೇಸರಿ

ಅರಾಸೆಯ ಒಸಗೆ

—— o ——

ಸೂರ್ಯನುದಿಸಿಹನೋಡು ನಿದ್ದೆಯನು ಕೊನೆಮಾಡು
ಏಳಿನ್ನು ಮನದನ್ನೆ ಗಂಟೆ ಎಂಟಾಯ್ತು
ಕಣ್ತೆರೆದು ದಯಮಾಡು ಕಾಫಿ ಒಲೆಯನುಹೂಡು
ಆಳಿಂಡಿಯಾಕಾಶ ವಾಣಿ ಒರಲು ತಿದೆ! —೧

ಹಾ! ತುಂಬು ಬಟ್ಟಲನು ಕಾಲವದು ತಾನೋಡಿ
ಕೈಗೆ ದೊರಕದೆ ಪರಿವ ವೇಯ ವಿವರಿಸಲೇ
ಮೂವತ್ತು ಮುಗಿದಿತ್ತು; ಒಂದಿಂದು ಬಂದಿಹುದು
ಸಂಬಳದ ದಿವಸವೂ ಕಂಬನಿಯದೇಕೆ? —೨

ಟೆಹ್ರಾನ ಮುಸದಿಕ್ಕು, ದೆಹಲಿಯಾ ವೈಸ್ರಾಯ
ಟ್ರೂಮನ್ ಫರೂಕರೆಲ್ಲರು ವಿಂಡ ಜೊತೆಗೆ
ಹಾರಿಹೋದರು! ಆದರೇನು? ಮಲೆನಾಡಿನಲಿ
ಕಾಫಿ ಬೆಳೆವುದು ಟೀಯು ಅಸ್ಸಾಮಿನಲ್ಲಿ —೩

ನೆಲ್ಲಿ ಮರದಡಿಯಲ್ಲಿ ನವ್ಯಕಾವ್ಯವದಿರಲು;
ತಾಲಿ ಪಿಟ್ಟೆಂಟು; ಕೊಳಗದಲಿ ಕಾಫಿ
ಮೇಣ್ ಪ್ಲೇಯರ್ಸ್; ಜೊತೆಗೆ ನಿನ್ನ ಸಂಗೀತವಿರೆ
ಎಲ್ಲಿದ್ದರೇನಂತೆ ಅದೆ ಸಗ್ಗವಲ್ತೆ —೪

ವಿಜ್ಞಾನಿ ರಾಜಕಾರಣಿಗಳೆಲ್ಲರು ಸೇರಿ
ಯೂನೊದಲಿ ಶಾಂತಿ ಸಮ್ಮೇಲನವ ನಡೆಸೆ
ನಾ ಪೋಗಿ H. ಬಾಂಬ ಕಂಡು ಭಯದಿಂನಡುಗಿ
ಹೋದ ದಾರಿಯಲೆ ಬೆಪ್ಪಾಗಿ ಹಿಂಬರಿದೆ —೫


ಅದರಿಂದ ಲಾ ಕಾಫಿಯಧಿ ದೇವತೆಯು ಬಂದು
ಹೋಟಲಿನ ಬಾಗಿಲಿನಲಿ ಮುಗುಳು ನಗೆಯಿಂದ
ಮುದದಿಂದ ನಿನ್ನಾತ್ಮ ವನುಕರೆದು ಬಟ್ಟಲಲಿ
ಸುಧೆಯು ನೀಡಲು ಬೆದರದವನು ಕುಡಿ ನೀನು —೬

ಹೈಡ್ರೊ ಜನ್ನಿನಲಿ ಬಾಂಬಿನ ಬೀಜವಿರಿಸಿದನೆ
ಹಾಲಿವುಡ್ಡಿನಲಿ 3-Dಯ ತರಿಸಿದನೆ
ನರನ ಕುರಿಯೆನ್ನಿಸಿದ ಆಶೆಗಳ ಹೊರೆಗಾಗಿ
ಅವನೊಳ್ ಕ್ಷಮಾರವ ನೀಡು ಮೇಣ್ ಬೇಡು —೭

ಅಳಿವೆನ್ನ ಬಾಳಿದನು ಕಾಫಿಯಿಂ ಬೆಳಗಿಸೀ
ತನುವಳಿದ ಬಳಿಕೆನ್ನ ಕಾಫಿಯಲಿ ತೊಳೆದು
ಸಿನಿಮ ಥೇಟರಿನ ಪಕ್ಕದಲೆನ್ನ ಸುಟ್ಟು
ಬೂದಿಯ ನಿರಿಸು ಕಾಂಗ್ರೆಸ್ಸಿ ನೆಗ್ಸಿಬಿಷನಲ್ಲಿ — ೮

ಮೊನ್ನೆ ಬೀದಿಯಲಿ 'Hindu' ಹುಡುಗ ಕೂಗಿದನು
'ದೇಶಮುಖ ನಾಲ್ಕನೆಯ ಬಡ್ಜೆಟ್ಟನಿಟ್ಟ'
ಮನುಪುತ್ರ ರೊಬ್ಬ ರೊಬ್ಬರ ಕಂಡು ಪೇಳಿದರು
'ಬಂತು ತೆರಿಗೆಯಭಾರ ಬೆನ್ನ ಬಗ್ಗಿಸಿರಿ' —೯

—ಅ. ರಾ ಸೇ.



ಇದು ಸರ್ಕಾರದ ಕಾರ್ ಕಣ್ರೀ!
ಎಲ್ಲಾ ರಿಪೇರಿನೂ ಮಾಡಿ. ನನ್ನ ನೋಡಿ ನೀವು ಅನುಮಾನ ಪಡೋಹಾಗಿದೆ.
ಬಿಲ್‌ಗೇನೂ ಹೆದರಬೇಡಿ—

ನಾಲಗೆಯ ಪಾಡು

ಮಗಳು ಗಂಡನ ಮನೆಯಲ್ಲಿದ್ದಳು. ಹೋದಂದಿನಿಂದ ಕಾಗದವೇ ಬಂದಿರಲಿಲ್ಲ.

ಅತ್ತೆ ಅಂದರೆ ಅಸುರ ಜಾತಿಯವಳು. ನಾದಿನಿಯೆಂದರೆ ಶುದ್ಧ ನಾಗಿಣಿ; ಭಾವ ಬಸವಣ್ಣ; ಪತಿರಾಯ ಪಶು; ಒಟ್ಟು, ನನ್ನ ಮಗುವಿಗೆ ನರಕ-ಎಂದು ಯೋಚಿಸಿ ಕೊರಗುತ್ತಾ ಹುಳಿಗೆ ಎಳೆಸೌತೆಯ ಕಾಯಿಯನ್ನು ಹಚ್ಚುತ್ತಿದ್ದರು ತಾಯಿ. ಆಗ ಯಜಮಾನರ ಸವಾರಿ ಅಡಿಗೆಮನೆಗೆ ಚಿತ್ತೈಸಿತು.

ರಿಟೈರಾಗಿ ಮನೆಯಲ್ಲಿ ಕೂತಮೇಲೆ ನಾಲಗೆ ಚಪಲ ಕೇಳಬೇಕೆ? ಉಪ್ಪು ಮೆಣಸು ಕೂಡಿದವು. ಸೌತೆಕಾಯಿಯ ಹೋಳುಗಳು ಒಂದೊಂದಾಗಿ ಖಾಲಿಯಾಗ ತೊಡಗಿದವು.

"ಹೆಣ್ಣು ಹೆತ್ತವಳಿಗೆ ಸುಖವಿಲ್ಲ" - ಎಂದು ಮುಂತಾಗಿ ಯಜಮಾನಿ ತಮ್ಮ ದುಃಖವನ್ನು ತೋಡಿಕೊಂಡರು.

"ಏನ್ಮಾಡೋಕೆ ಆಗುತ್ತೆ ಹೇಳು-ಈ ಪ್ರಪಂಚಕ್ಕೆ ಬಂದ ಮೇಲೆ ನಮ್ಮ ನಮ್ಮ ಪಾಲಿಗೆ ಬಂದಿದ್ದನ್ನ ಅನುಭವಿಸಲೇಬೇಕು. ಸರಸೂಗೆ ಗಂಡನ ಮನೇಲಿ ಹಿಂಸೆ ಅಂಬೋದು ನಿಜವೇ ಆ ಜನಗಳೇ ಹಾಗೆ. ಆದರೆ ಅವರ ನಡುವೆ ಈಕೆ ಹೇಗಾದರೂ ಸುಧಾರಿಸಿಕೊಂಡು, ಹೊಂದಿಕೊಂಡು ಬದುಕೋದಕ್ಕೆ ಕಲೀದೇ ಇದ್ರೆ ಆಗುತ್ಯೆ ಹೇಳು."

"ಒಳ್ಳೇಮಾತು ಹೇಳಿದಿರಿ! ನಿಮಗೇನು; ಗಂಡಸರು-ಹೆಣ್ಣುಮಕ್ಕಳ ಸುಖ ದುಃಖ ಎಲ್ಲಿ ತಿಳಿಯುತ್ತೆ! ಮಗು ಆ ರಾಕ್ಷಸರ ಮಧ್ಯೆ ಎಷ್ಟು ದಿನಾಂತ ಅನುಭವಿಸೋದು?.... ಹೋಳೆಲ್ಲ ಖಾಲಿ ಮಾಡ್ತಿದೀರಾ? ಹುಳೀಗೆ ಏನು ಹಾಕೋದು.... ಸಾಕು.... ಬಿಡಿ...."

"ಹುಳಿ ನನಗೆ ನೀರು ನೀರಾಗಿದ್ದರೆ ಚೆನ್ನು ಕಣೇ! ಅದಿರ್‍ಲಿ ಸರಸು ಗಂಡನ ಮನೆ ವಿಚಾರ ಹೇಳ್ತೀನಿ. ಅವರೆಲ್ಲಾ ರಾಕ್ಷಸರೇ ಅಂತಿಟ್ಕೊ. ಆದರೆ ಈಕೆ ನಡಕೊಳ್ಳೋದರಲ್ಲಿಯೂ ಇದೆ. ರೇಗ್ಬೇಡ! ಸೀತಾದೇವಿ ರಾಕ್ಷಸರ ಮಧ್ಯೆ ಇರಲಿಲ್ಲವೆ. ಆ ಭಾತಿ ಬೇಕು ಹೆಣ್ಣುಮಕ್ಕಳಿಗೆ! ಆ ಶಕ್ತಿ ಇಲ್ಲದೇ ಇರೋದಕ್ಕೆ ತಾಯಂದಿರೇ

ಕಾರಣ.... ನಿನಗೆ ಹೇಳ್ತಾ ಇಲ್ಲ ರೇಗ್ಬೇಡವೆ! ಈವಾಗ ನೋಡು ನನ್ನ ಬಾಯಲ್ಲಿ ೩೨ ಹಲ್ಲುಗಳಿವೆ. ಹುಳು ಹಿಡಿದು ಎಂಟೋ ಹತ್ತೋ ಹೋಗಿದ್ದಿರಬಹುದು. ಅಂತೂ ೨೦ಕ್ಕೆ ಮೋಸವಿಲ್ಲಾನ್ನು. ಈವಾಗ ನೋಡು, ಹಲ್ಲುಗಳೇ ರಾಕ್ಷಸ್ರು.... ಅಲ್ಲಾ ಬೀಗರು ಅಂತಿಟ್ಕೊ! ಈ ನಾಲ್ಗೆ ಇದೆಯಲ್ಲ ಇದರ ಹಾಗಿರಬೇಕು ನಮ್ಮ ಸರಸು! ಈ ಸೌತೇಕಾಯಿ ಹೋಳುಗಳನ್ನ ಇರೋ ಇಪ್ಪತ್ತಕ್ಕೆ ಕಡಿಮೆಯಿಲ್ಲದ ಈ ಹಲ್ಲುಗಳು ಅಂದ್ರೆ ರಾಕ್ಷಸರು, ಕರ್–ಕರ್ ಅಂತ ಕಚ–ಪಚ ಅಂತ ಅಗದ್ಬಿಟ್ಟು, ಅರದ್ಬಿಟ್ಟು ಪಲ್ಪುಮಾಡಿ ಅಂದರೆ ಗೊಜ್ಜಿನ ತರಹ ಮಾಡ್ತಾ ಇವೆ. ಈ ಜಾಣೆ ನಾಲ್ಗೇನೋ ಅದಕ್ಕೆ ಉಪ್ಪು ಮೆಣಸು ಬೆರಸಿ ಆ ಸವೀನ ಅನುಭವಿಸ್ತಾ ಇದೆ. ಆನಂದಪಡ್ತಾ ಇದೆ! ಹಗಲೂ ರಾತ್ರಿ ಅದಿರೋದು ಈ ರಾಕ್ಷಸರ– ಅಂದ್ರೆ ಹಲ್ಲುಗಳ ಮಧ್ಯದಲ್ಲಿ ಎಳೆಸೌತೆಕಾಯಿ ಬಾಯಿಗೆ ಬಿದ್ರೆ ಇವು ಕೆಲಸ ಮಾಡೋ ರೀತಿ ನೋಡು ಎಂಥ ಭಯಂಕರವಾಗಿದೆ! ಆದರೆ ಈ ನಾಲ್ಗೆ ಇದೆಯಲ್ಲ, ಅವುಗಳ ನಡುವೆ ಎಷ್ಟೊಂದು ಜಾಣ್ತನದಿಂದ ಸವೀನ ಹೀರ್ತಾ, ಮಾತೂನೂ ಆಡ್ತ, ಹೊರಳಾಡ್ತಿದೆ! ನಲಿದಾಡ್ತಾ ಇದೆ! ಒಂದು ಸಲಾನಾದ್ರೂ ರಾಕ್ಷಸ ದಂಷ್ಟ್ರಗಳಿಗೆ ಸಿಗುತ್ತ್ಯೆ 'ಕಟುಂ' ಅನ್ನಿಸಿ ಕೊಳ್ಳೋದಕ್ಕೆ? ಹಾಗಿರಬೇಕು.... ಈವಾಗ ನೋಡು ”

ನೋಡಿದೀನಿ! ನೋಡಿದೀನಿ! ಚೆನ್ನಾಗಿ ನೋಡಿದೀನಿ! ಕತ್ತರಿಸಿಹಾಕಿದ ಹೋಳೆಲ್ಲ ಖಾಲಿಯಾಗ್ತಿವೆ. ಸಾಕು ವೇದಾಂತ ನಡೀರಿ ...”

“ರೇಗ್ಬೇಡವೆ! ಕೊಂಚ ತಾಳು. ಇನ್ನೆರಡೇ ಚೂರು ಸಾಕು. ಉಪ್ಪು ಖಾರ ಕೊಂಚ ಉಳಿದಿದೆ! ... ಹಂ.... ಹಃ ... ಅದೇ ಹೇಳ್ತಿದ್ನಲ್ಲಾ. ನಮ್ಮ ಸರಸು ಆ ಪೀಡೆ ಕೊಡೋ ಪಾಪಿಗಳ ನಡುವೆ ಹೇಗಿರಬೇಕಂತ ತಿಳೀತೇನು? ೩೦ ಹಲ್ಗಳ ಮಧ್ಯೆ ನಲಿದಾಡಿ ಸುಖಪಡ್ತಿರೋ ನನ್ನಾಲ್ಗೆ ಇದೆಯಲ್ಲ........ಅಯ್ಯೊ ಅಯ್ಯ ಯ್ಯೊ....

ಅಯ್ಯೋ! ಏನಿದು! ನಾಲ್ಗೆ ಕಚ್ಕೊಂಬಿಟ್ರಾ? ಮುಕ್ಕಬೇಡಿ, ಸಾಕು–ಅಂದ್ರೆ ಕೇಳ್ತೀರಾ? ಲೋ ರಾಮು ಬಾರೋ ಇಲ್ಲಿ ನಾಲ್ಗೆ ಅಗ್ಕೊಂಬಿಟ್ರು .. ತೊಗೊಳ್ಳಿ, ಈ ಬೆಲ್ಲಾ.... ಬಾಯಿಗೆ ಹಾಕ್ಕೊಳ್ಳಿ.... ರಕ್ತ ನಿಲ್ಲುತ್ತೆ.... ಹುಂ.... ರಾಮಾ ರಕ್ತ.... ರಾಮಾ ರಕ್ತ....

....ರಾಮುಕೃಷ್ಣ.

೨

ಎರಡನೆಯ ಪಾಠ.

ಯೋಗಿ ಭೋಗಿ

ನೇಗಿಲು	**ಯೋಗಿ**	**ನಿಜ**
ಬಾಗಿಲು	**ಭೋಗಿ**	**ಸಹಜ**

ನೇಗಿಲು ಭೂಮಿಯನ್ನು ಉಳುತ್ತದೆ. ಉತ್ತ ಭೂಮಿಯಲ್ಲಿ ಬೆಳೆ ಚೆನ್ನು. ಬೆಳೆದಿದ್ದನ್ನು ಕಣಜಕ್ಕೆ ಹಾಕು. ಬಾಗಿಲು ಮುಚ್ಚು. ಬೆಲೆ ಹೆಚ್ಚು. ಬಾಗಿಲು ತೆಗಿ. ನೀನು ಯೋಗಿ. ಇದು ನಿಜ! ಇದು ಸಹಜ!!

ನೇಗಿಲು ಹಿಡಿದವ ಯೋಗಿ. ಕವಿಗಳನು ಕೇಳು. ಜನ ನಾಯಕ-ರನ್ನು ಕೇಳು. ಕೇಳಿ-ದವರು ಹೇಳುತ್ತಾರೆ. ನೇಗಿಲು ಹಿಡಿದವ ಯೋಗಿ. ಇದು ನಿಜ! ಇದು ಸಹಜ!!

ಬಾಗಿಲು ಮಾಡಿದ. ಬಡಗಿ ಮಾಡಿದ ಬಾಗಿಲನ್ನು. ಮರವನ್ನು ತಂದ. ಗರ-ಗಸದಲ್ಲಿ ಕೊಯ್ದ. ಅಳತೆ ಹಾಕಿದ. ತೋಪು ಹಿಡಿದ. ವೆಜ್ಜ ಮಾಡಿದ. ಬಾಗಿ-ಲನ್ನು ಮಾಡಿದ. ಬಾಗಿಲಿಗೆ ಬೆಣ್ಣೆ ಎಣ್ಣೆ ಹಚ್ಚಿದ. ಏಕಾದಶಿ ಮಾಡಿದ. ಬಡಗಿ ಭೋಗಿ. ಇದು ನಿಜ! ಇದು ಸಹಜ!!

ಬಾಗಿಲು ಮಾಡಿದ ಬಡಗಿ ಭೋಗಿ, ಭಡವ! ಕವಿಗಳನ್ನು ಕೇಳು. ಜನ ನಾಯಕ-ರನ್ನು ಕೇಳು. ಕೇಳಿದವರು ಅಂದೇ ಅನ್ನುತ್ತಾರೆ. ಬಡಗಿ ಭೋಗಿ. ಬಾಗಿಲು ಕಡೆದವ ಭೋಗಿ. ಇದು ನಿಜ! ಇದು ಸಹಜ!!

ಹೇಳಿ ಬರೆಯಿಸಿ:—

ನೇಗಿಲು,	ಬಡಗಿ,	ನಿಜ.
ಯೋಗಿ,	ಭೋಗಿ,	ಸಹಜ.

ಚಂಚು ಗಂಡ

ಇಬ್ಬರ ಮುಖವೂ ಕೆಂಪಗಾಗಿತ್ತು. ಅವನ ಮುಖದಲ್ಲಿ ಭಯ, ನಾಚಿಕೆ, ಕೋಪ. ಅವಳ ಕಂಗಳು ಕಿಡಿ ಕಾರುತ್ತಿದ್ದವು.

"ಶುರುಮಾಡಿದಿರಲ್ಲಾ, ಮತ್ತೆ"

"ಏನೇ ಇದು? ನಾನೇನು ಪ್ರಾರಂಭಿಸಿದೆ ಈಗ? ಏಕೆ, ಲೀಲಾ, ಇಷ್ಟು ಸಿಡುಕು ಇವತ್ತು" ಪಾಪ, ಇನ್ನೂ ಹೊಸದು. ಮೊದಲ ಮದುವೆ ಇರಬೇಕು. ಹೆಂಗಳ ಸ್ವಭಾವ ತಿಳಿದುಕೊಂಡಿಲ್ಲ. ಅವರು ಒಂದುಕ್ಷಣ ಜಗನ್ಮೋಹಿನಿ, ಮರುಕ್ಷಣ ಜಗನ್ನಾಶಿನಿ, ಎಂಬುದನ್ನರಿಯ....ಹೀಚು.

"ಇರಲಿ, ಬಿಡಿ! ಆ ಸಕ್ಕರೆ ಪಾತ್ರೆ ಕೊಡಿ ಇಲ್ಲಿ"

ಅವನು ಕೊಡಲಿಲ್ಲ; ಎಡಗೈಯಿಂದ ಅದನ್ನು ಬಲವಾಗಿ ಹಿಡಿದೇ ಇದ್ದ–ಧೀರ. "ಏನದು ನಾನು ಮತ್ತೆ ಶುರುಮಾಡಿದ್ದು, ನಿನಗೆ ಕೋಪ ಬರುವಂಥದ್ದು, ಹೇಳು" ಎಂದ.

"ಅಲ್ರಿ! ಚಂಚುಗಂಡ ಬಿ.ಇ. ಪಾಸಾಗಿದಾನೆಯೆ, ಅಂತ ನಾನು ಕೇಳಿದ್ದಕ್ಕೆ, ನೀವು, ಆಗಿದಾನೆ, ಸಿವಿಲ್, ಎರಡನೆಯ ಕ್ಲಾಸ್, ಈ ವರ್ಷ ಅವನೇ ಅವನ ಕ್ಲಾಸಿಗೆ...."

"ಹೌದು, ನಿಜ! ಅದರಲ್ಲಿ ತಪ್ಪೇನು?"

"ನಾನು ಕೇಳಿದ್ದೇನು?"

"ಅವನು ಪಾಸಾಗಿದಾನೆ ಅಂತ ಹೇಳಿದರೆ, ನಿನಗೆ ಕೋಪ ಬರುತ್ತದೆ, ಅಂತ...."

"ನನ್ನಮಾತು ಪೂರ್ತ ಕೇಳಬಾರದೆ?"

"ಅವನು ಎಂಥ ಎಂಜಿನಿಯರ್ ಅಂತ ತಿಳಿಯಬೇಕು ಅನ್ನಿಸಿದಾಗ, ನಾನೇ ಕೇಳುತ್ತೇನೆ, ನಿಮ್ಮನ್ನ....ಅದು ಬಿಟ್ಟು, ಈಗಲೇ, ನನ್ನ ತಲೆಯಮೇಲೆ...."

"ಕ್ಷಮಿಸು"

"ಹಾಗೆ ಬನ್ನಿ! ಪಾಸಾಗಿದಾನೆಯೆ ಅಂತ ಅಷ್ಟು ಕೇಳಿದರೆ, ಸಿವಿಲ್, ಎರಡನೇ ಕ್ಲಾಸು, ಲೊಟ್ಟೆ ಲೊಸಕು ಮಣ್ಣು ಮಸಿ...."

"ಅಲ್ಲ, ಲೀಲಾ"

ನವದಂಪತಿಗಳಿರಬೇಕು. ಕಾರ್ಡ್‌ರಾಯ್ ಷರಾಯಿ, ಜಾರ್ಜೆಟ್ ಸೀರೆ.... ನನ್ನ ಪಕ್ಕದ ಟೇಬಲ್‌ನಲ್ಲಿ ಕಾಫಿ ಸವಿಯುತ್ತಿದ್ದರು.

"ಅಲ್ಲ ಕಣೆ...."

"ಸಕ್ಕರೆ ಪಾತ್ರೆ ಕೊಡಿ, ... ನೂಕಿ ಈಚೆ ..." ಅವನು ನೂಕಲಿಲ್ಲ, ಧೀರ.

"ಅದಿರಲಿ, ಲೀಲಾ, ಶುರುಮಾಡಿದಿರಲ್ಲಾ ಮತ್ತೆ, ಅಂದೆಯಲ್ಲಾ.... ಅದರರ್ಥ ವೇನು?" ಎಂದ.

"ಹೇಳುತ್ತೇನೆ, ಕೇಳಿ.... ಬಸ್ಸಿನಲ್ಲಿ ಬರುವಾಗ, ಗೋಪಾಲಪುರಂ ಬಸ್ ಯಾವುದು ಅಂತ ಆ ಕುಂಟುಮುದುಕ ಕೇಳಿದರೆ, ನೀವು, ಇದು ಬಸವನಗುಡಿಯದು, ಅದು ಅಲಸೂರಿನದು, ಅದರಾಚೆಯದು ಗೋಪಾಲಪುರ, ಲೊಟ್ಟೆಲೊಸಕು, ಏನೇನೊ ಕೆಲಸಕ್ಕೆ ಬಾರದ ಪುರಾಣ ಎಲ್ಲ ಯಾಕೆ ಒದರಿದಿರಿ....ಆಗಲೇ ನನಗೆ ರೇಗಿತು"

"ನೀನು ಅಸಾಧ್ಯ ಹುಡುಗಿ, ಲೀಲಾ .. ವಿವರವಾಗಿ ಹೇಳಿದರೆ, ತಪ್ಪೇನು? ನನಗೊಂದೂ ತೋಚುವುದಿಲ್ಲ, ಲೀಲಾ"

"ಅದಿರಲಿ! ಬೆಳಿಗ್ಗೆ ವಾಕಿಂಗ್ ಹೋಗುತ್ತಿದ್ದಾಗ, ಆ ಲಾಯರು ನಮ್ಮ ನಾಯಿ ಯಾವಜಾತಿಯದು, ಎಂದಾಗ....?"

"ಏನಂದೆ... ?"

"ಅದರ ಜಾತಿ ಉಪಜಾತಿ ಅದಿಷ್ಟುಮಾತ್ರ ಹೇಳದೆ "

"ಏನು ಹೇಳಿದೆ?"

"ಅದರ ತಂದೆ ಜಾತಿ ತಾಯಿ ಜಾತಿ, ಪಕ್ಕದಮನೆ ನಾಯಿಗಿತ್ತಿ ಜಾತಿ, ಎದುರು ಮನೆ ನಾಯಿ ಜಾತಿ.... ಥು, ಥು ಥು.... ಗಂಟೆ ಎಷ್ಟು ಅಂತ ನಿಮ್ಮನ್ನ ಕೇಳುವು ದಕ್ಕೇ ಭಯ ನನಗೆ.... ನಿಮ್ಮ ಗಡಿಯಾರದಲ್ಲಿ ಆರೂಕಾಲು, ಕಾರ್ಪೊರೇಷನ್ ಗಡಿ ಯಾರದಲ್ಲಿ ಏಳೂಮುಕ್ಕಾಲು, ಆಕ್ಯುಪೇಷನಲ್ ಗಡಿಯಾರದಲ್ಲಿ ಐದೂವರೆ, ಜಪಾನಿ ನಲ್ಲಿ ಎರಡು, ಲಂಡನ್ನಿನಲ್ಲಿ ಒಂದು....ಥು....ಥು....ಥು...." ಎಂದಳು.

ಅವನು ಸುಸ್ತಾದ.

"ಸಕ್ಕರೆ!" ಎಂದಳು, ಗಟ್ಟಿಯಾಗಿ. ಅವನು ದಿಗ್ಭ್ರಾಂತನಾಗಿ, ನಿಶ್ಚೇತನ ನಾಗಿ ಕುಳಿತಿದ್ದ.

ಪಕ್ಕದ ಟೇಬಲ್‌ನಲ್ಲಿ ಕುಳಿತಿದ್ದ ನನ್ನ ಕೆಲಸ ಆಗತಾನೆ ಮುಗಿದಿತ್ತು. ನಾನು ಎದ್ದೆ.

ನನ್ನ ಮೇಜಿಂದ ಸಕ್ಕರೆಪಾತ್ರೆ ಚಮಚ ಸಿಗರೇಟ್ ಬೂದಿತಟ್ಟೆ ಹೂವಿನಹೂಜಿ ಎಲ್ಲವನ್ನೂ ಅವರ ಮೇಜಿನ ಮೇಲಿರಿಸಿ, ಬಾಗಿಲಕಡೆ ಓಡಿದೆ.

—ರೇವಣ್ಣ.

ಈ ಜನ

ಬಾವುಟ ತೋರಣ ಹಾರ ತುರಾಯಿ
ಜೈ ಜೈಕಾರವು, ಎಲ್ಲೆಲ್ಲೂ
ಹಳ್ಳಿ ಹಳ್ಳಿಯಲು ಭಾಷಣ ಧೂಪ-
ಮರುಳು ಮಾಡಿದರು, ಪ್ರತಿನಿಧಿಯ

ಶಬ್ದಕೋಶದಲಿ ಮಾತೇ ಇಲ್ಲ
ಅವನನು ಹೊಗಳಲು ಈ ಜನಕೆ
ನೀವೇ ಚಂದಿರ ನೀವೇ ಇಂದಿರ-
ಮರುಳು ಮಾಡಿದರು, ಪ್ರತಿನಿಧಿಯ

ಬಾವುಟ ತಗ್ಗಿತು, ತೋರಣ ಬಾಡಿತು
ಜೈ ಜೈಕಾರವು, ಇನ್ನಿಲ್ಲ
ಹಳ್ಳಿ ಹಳ್ಳಿಯಲು ಭೀಷಣ ರೂಪ-
ಮರಳು ಎನ್ನುವರು, ಪ್ರತಿನಿಧಿಯ

ಶಬ್ದಕೋಶದಲಿ ಮಾತೇ ಸಾಲದು
ಅವನನು ತೆಗಳಲು ಈ ಜನಕೆ
ನೀವೇ ಬಂದಿರಾ? ಅವನೇ ಅಂದಿರಾ?-
ಮರಳು ಎನ್ನುವರು, ಪ್ರತಿನಿಧಿಯ

—ರೇವಣ್ಣ.

ನೀರಾಸನ

ದಿಂಬಿಗೆ ತಲೆ ತಾಕುತ್ತಲೂ, "ನಿದ್ದೆಯ ಲೋಕದಿ ಕನಸಿನ ಬೀದಿ"ಗೆ ನುಗ್ಗುವ ಧಾಂಡಿಗರನ್ನು ಕಂಡರಾಗದು, ನನಗೆ! ನನ್ನಂಥ ನಿಧಾನಸ್ಥರಿಗೆ ಅದು ಅಪಮಾನ, ಮೂದಲಿಕೆ. ನನ್ನ ಪಕ್ಕದ ಹಾಸಿಗೆಯಲ್ಲಿ ಮಲಗಿ ಆತ ಗೊರಕೆ ಹೊಡೆಯುವುದು, ನಾನು ಮಾತ್ರ ಅತ್ತಿತ್ತ ಹೊರಳಾಡುವುದು–ಏನು ಚೆನ್ನ, ಹೇಳಿ. ಸ್ನೇಹ ಅಂದರೆ, ನನ್ನನ್ನ ಹೀಗೆ ಕೈ ಬಿಟ್ಟುಬಿಡುವುದೆ? ತಾನುಮಾತ್ರ "ನಿದ್ರಾಂಗನೆಯ ತೆಕ್ಕೆಯಲಿ...."

ನಾನೂ ಪ್ರಯತ್ನಮಾಡಿದೆ; ಮಾಡಿದಷ್ಟೂ ಕಷ್ಟವಾಯಿತು. ಹೊಸಜಾಗ; ದೊಡ್ಡ ರೂಮು; ಶಿಖೆ; ಸೊಳ್ಳೆಕಾಟ; ತಿಗಣೆಗಳಿವೆಯೋ ಎಂಬ ಅನುಮಾನ; ಬಲವಾದ ಊಟ ಬೇರೆ, ಹೊಟ್ಟೆ ತುಂಬ; ಅದರಿಂದಾದ ಹುಳಿತೇಗು. ಏನೇನೋ ಯೋಚನಾತರಂಗಗಳು – ಜಿನೀವಾ, ವಿಯತ್‌ಮಿನ್, ವಿಯತ್ನಾಂ, ಮಕ್ಕಾರ್ತಿ, ಮಗನಿಗೆ ಮೆಡಿಕಲ್ ಕಾಲೇಜು ಸೀಟು, ಮಂತ್ರಿಗಳ ಮೇಲೆ ಅವಿಶ್ವಾಸ ನಿರ್ಣಯ, ಕನ್ನಂಬಾಡಿ ಮತ್ತೆ ಬತ್ತಿದರೆ ಗತಿ ಏನು, ಘೋಷಾವಾರು ಪ್ರಾಂತ್ಯ....ಹುಚ್ಚು! ಹುಚ್ಚು! ತುದಿ ಮೊದಲೇ ಇಲ್ಲ....ತಲೆ ಬುರುಡೆ ಗಿರ್ರನೆ ಸುತ್ತಿತು.

ಸುಸ್ತು. ನಿದ್ದೆ ಬಂದ ಹಾಗಾಗುವುದು; ಹಲ್ಲು ಕಿರಿದು ಓಡಿಹೋಗುವುದು. ಇನ್ನೇನು ಕನಸು ಬಿತ್ತು ಎಂಬುವುದರೊಳಗೆ ನಾನೇ ಯಾವುದೋ "ಟಿಪ್ಪೂಸ್‌ಫಾಲ್" ನಿಂದ ಕೆಳಗೆ ಬಿದ್ದಂತಾಗುವುದು. ಅರ್ಧ ನಿದ್ದೆ, ಅರ್ಧ ಎಚ್ಚರ....ಅಂತೂ ಇಂತೂ, ತಲೆಸಿಡಿತ ನಿಂತು, ಕೊಂಚ ಕಣ್ಣುಮುಚ್ಚಿದೆ....ಆಗ,... ಏನದು?

ಮೈ ಜುಂ ಎಂದಿತು. ರೋಮಾಂಚನವಾಯಿತು. ನಾಲಗೆ ಒಣಗಿತು. ಯಾವುದೋ ಭಯ ಭೀತಿ....ಹುಂ! ಗರಗರ ಎಂಬ ಒಂದು ಸದ್ದು.... ದೂರದಿಂದ ಸರಸರನೆ ಹತ್ತಿರ ಬಂತು. ಬಿರುಗಾಳಿಯೆ? ಪ್ರವಾಹವೇ? ಭೂಕಂಪವೇ? ಕಾರ್ಖಾನೆ ಚಕ್ರವೆ? ಸೈನ್ಯದ ಧಾಳಿಯೆ?....ಅಯ್ಯೋ! ನನ್ನ ಕೋಣೆಯೊಳಕ್ಕೇ ಬಂತಲ್ಲಾ....

ಥತ್! ಇಷ್ಟು ಸಣ್ಣ ವಿಷಯಕ್ಕೆ ಇಷ್ಟು ದೊಡ್ಡ ಹೆದರಿಕೆಯೆ?... ನಿಜಕ್ಕೂ ನನ ಗೇನೋ ಆಗಿದೆ, ಸಂದೇಹವಿಲ್ಲ....

ಅಲ್ಲಾ, ಕತ್ತಲೆ ಅಂದರೆ ಇಲಿಗಳು ಇದ್ದೇ ಇರುತ್ತವೆ. ಅವು ಯಾವುದೋ ತೆಂಗಿನ ಕರಟವನ್ನ ಕರ ಕರ ಕೆರೆದರೆ.... ನವ್ಯ ಕವಿಗಳ ಹಾಗೆ–ನಾನು.... ಯಾವ ಯಾವುದನ್ನೋ ಊಹಿಸಿ...."ಹ ... ಹ್ಹ.... ಹ್ಹ... " ನಕ್ಕೆ.

ಸರಿ! ಇನ್ನೇನು? ನಿಜಾಂಶ ಪತ್ತೆ ಆಯಿತಲ್ಲಾ... ನಿದ್ದೆ ಮಾಡೋಣ, ಎಂದು ಎಡಕ್ಕೆ ತಿರುಗಿದೆ. ಆದರೆ, ಬೇಡವೆಂದರೂ, ಆ ಕರ ಕರ ನನ್ನ ಬುರುಡೆಯನ್ನು ಪ್ರವೇಶಿಸಿತು. ಬೇಕೆಂತಲೇ ಆ ಇಲಿ ನನ್ನನ್ನು ಕಾಡಿಸಿತು. ಒಂದೇ ಸಮನೆ ಗರ ಗಸದ ಹಾಗೆ ಅದು ಕರಟವನ್ನು ಕತ್ತರಿಸುತ್ತಿದ್ದರೆ, ನನಗೆ ಅಷ್ಟು ತೊಂದರೆ ಆಗುತ್ತಿರ ಲಿಲ್ಲ. ಆಗಾಗ ನಿಲ್ಲಿಸಿ, ಮತ್ತೆ ಪ್ರಾರಂಭಿಸಿ, ಬಿರುಸಾಗಿ, ಮೆತ್ತಗೆ, ಒರಬರನೆ, ಬಿರುಬಿರನೆ, ಹೀಗೆ ಅದರ ಕೆಲಸ ಸಾಗುತ್ತಿತ್ತು. ಹೊರಕಿವಿಯನ್ನು ಮಡಿಚಿ ಒಳ ಕಿವಿಯನ್ನು ತುರುಕಿ ಮುಚ್ಚಿ ಒತ್ತಿದರೂ, ಟಿಂಪನಕ್ಕೆ ಬಡಿಯುವುದು, ಆ ಅಲೌಕಿಕ ಗರಗರ!

ಮಾನವ ದಾನವನಾದೆ. ಹಾಸಿಗೆಯಮೇಲೆ ಎದ್ದು ಕುಳಿತೆ. ತಲೆದೆಸೆಯಲ್ಲಿದ್ದ ನನ್ನ ಚಪ್ಪಲಿಯನ್ನೆತ್ತಿ ಆ ಮೂಲೆಗೆ ಗುರಿ ಇಟ್ಟು ಹೊಡೆದೆ. ಅದು ಸೂರಿಗೆ ತಾಕಿ ನನ್ನ ಸ್ನೇಹಿತನ ಕಳೇಬರದಮೇಲೆ ಬಿತ್ತು. ಆತನಿಗೆ ಎಚ್ಚರವಾಯಿತು. ಆದರೆ, ಥಾಂಡಿಗ! ತೆಪ್ಪಗೆ ಮತ್ತೆ ನಿದ್ದೆ ಹೋದ. ಶಪಿಸಲೇ ಇಲ್ಲ "ಕರಕರ"! ಇನ್ನೊಂದು ಚಪ್ಪಲಿ ಇತ್ತಲ್ಲಾ.... ಅದನ್ನೂ ಪ್ರಯೋಗಮಾಡಿದೆ. ಗೋಡೆ ಮೇಲೆ ಕನ್ನಡಿ ಒಂದನ್ನು ತೂಗು ಹಾಕಿದ್ದರು, ಎಂದು ಆಗ ನನಗೆ ತಿಳಿಯಿತು. ಇಲಿಗೆ ಮಾತ್ರ ಕರಟ ಒಂದೇ ಸಾಕೆನಿಸಿತು. ನನ್ನ ಆರ್ಭಟಕ್ಕೆ ಅದು ಜಗ್ಗಲೇ ಇಲ್ಲ.

ನನ್ನೊಂದಿಗೆ ಅದು ಆಟವಾಡಲು ಪ್ರಾರಂಭಿಸಿತು. ನಾನು ಕೂಗಿ ನೋಡಿದೆ. ಸಿನಿಮ ಹಾಡುಗಳನ್ನು ಹಾಡಿದೆ. ಆಲ್‌ಜಿಬ್ರಾ ಉಚ್ಚರಿಸಿದೆ. ಊಹುಂ.

ದೀಪ ಹಚ್ಚಿರಿಸಿದರೆ, ಮಾತ್ರ, ಉಳಿಗಾಲ, ಎಂದೆನಿಸಿತು. ಎದ್ದೆ. ಮೇಣದ ಬತ್ತಿ ಮೇಜಿನ ಮೇಲಿತ್ತು, ಎಂಬ ನೆನಪಾಯಿತು. ಆದರೆ, ಮೇಜು ಎಲ್ಲಿ? ಯಾವ ದಿಕ್ಕಿನಲ್ಲಿ? ಅಲ್ಲದೆ, ಬೆಂಕಿಪೊಟ್ಟಣ? ಅದು ನನ್ನ ಗೆಳೆಯನ ಅಂಗಿಯ ಕಿಸೆ ಯಲ್ಲಿತ್ತೆಂಬ ಜ್ಞಾಪಕ. ಆದರೆ, ಅದನ್ನೆಲ್ಲಿ ತೂಗುಹಾಕಿದ್ದ?....ಯಾವ ಗೋಡೆ? ಯಾವ ದಿಕ್ಕು?

ಇಲಿಯ ಕೆರೆತ ಬರುತ್ತಿದ್ದ ಕಡೆ ನಡೆದುಹೋಗಲು ಧೈರ್ಯ ಬರಲಿಲ್ಲ. ಕತ್ತ ಲಲ್ಲಿ ಅದನ್ನು ತುಳಿದರೆ, .. ಅಸಹ್ಯ! ಬೇರೆ ದಿಕ್ಕಿಗೆ ನಡೆದೆ. ಮುಂಡಿಗೆ ಒಂದು ಬೆಂಚು ತಗುಲಿ ವಿಪರೀತ ನೋವಾಯಿತು. ಬಲಕ್ಕೆ ತಿರುಗಿದಾಗ, ಸ್ಟೂಲೊಂದು ಮಗುಚಿ ಬಿತ್ತು. ಅದರಮೇಲೆ ಎಡಗಾಲನ್ನಿರಿಸಿ ನಾನೂ ಬಿದ್ದೆ, ಒಂದು ಬಕ್ಕೆಟ್ ನೀರಿನೊಳಕ್ಕೆ. ದೊಡ್ಡ ಬಕೆಟ್ಟು.

ಅಲ್ಲಿಂದ ಎದ್ದರೆ, ಇನ್ನೇನು ಅನಾಹುತವೋ? ಹೊಸಜಾಗ, ಪರಿಚಯವಿಲ್ಲದ ಕೋಣೆ.... ತಣ್ಣಗೆ, ಅಲ್ಲಿ ಕೂತಿರುವುದೇ ಕ್ಷೇಮ, ಎನಿಸಿತು. ಇಲಿಯ ಕೆರೆತ,

ಸುತ್ತಲೂ ಹತ್ತಾರು ಮನೆಗಳ ಗಡಿಯಾರಗಳ ಗಂಟೆ ಹೊಡೆತ–ಇವುಗಳನ್ನು ಕೇಳುತ್ತ, ನನ್ನ ಸ್ನೇಹಿತನನ್ನು ಶಪಿಸುತ್ತ,....ನಾಲ್ಕೂವರೆ ಗಂಟೆಗಳಕಾಲ ಕುಳಿತೇ ಇದ್ದೆ.

ಬೆಳಗಾಗುತ್ತಲೂ, ನೋಡುತ್ತೇನೆ, ಬಕ್ಕೆಟ್ಟಿನಲ್ಲಿ ನೀರೇ ಇಲ್ಲ! ಎಲ್ಲವನ್ನೂ ನಾನು ಹೀರಿದ್ದೆ!

ಕಾಯೇ ಇಲ್ಲದ ಕರಟ ನನ್ನ ಹಾಸಿಗೆಯಮೇಲೆ ಬಿದ್ದಿತ್ತು.

—ಪಾಟಾಳಿ.

ನವ್ಯ ಗದ್ಯ

[ಕಳೆದ ಸಂಚಿಕೆಯಲ್ಲಿ ನನ್ನ "ಆರಾತ್ರಿ" "ಚುನಾವಣೆ" ಎಂಬ ಎರಡು ನವ್ಯ ಗದ್ಯ ಪ್ರಬಂಧಗಳು ಕೊರವಂಜಿಯಲ್ಲಿ ಪ್ರಕಟವಾದುವಷ್ಟೆ. ಅವನ್ನು ನಾನು ನವ್ಯ ಕಾವ್ಯಕ್ಕಿಂತ ಕಠಿನ ಎಂದು ಸಾರಿದ್ದೆ. ಇದನ್ನು ವಿರೋಧಿಸಿ ನವ್ಯಕಾವ್ಯ ಟೀಕಾ ಚಾರ್ಯರು ನಮಗೆ ಪತ್ರಬರೆದಿದ್ದಾರೆ. ಕೀ ಬಂಚಕರು, ನೀಲೀಕಡ್ಡದವರು ಎಂದರೆ ಹೊದಿನಿ, ಬ್ಲೂಬಿಯರ್ಡ್ ಎಂಬುದು ಸ್ಪಷ್ಟ ಎಂದೂ, ನವ್ಯಕಾವ್ಯವೇ ನನ್ನ ನವ್ಯ ಗದ್ಯಕ್ಕಿಂತ ಸಾವಿರಸಾಲು ಕ್ಲಿಷ್ಟವೆಂದೂ ಆದ್ದರಿಂದ ನವ್ಯಗದ್ಯ ತಿರಸ್ಕರಣೀಯವೆಂದೂ ಅವರು ಬರೆದಿದ್ದಾರೆ. ಡೋಬಿಟನ್‌ನ ಬಣ್ಣ ಎಂಬುದು ವಾಷಿಂಗ್‌ಟನ್‌ನ ವಾತಾ ವರಣವೆಂಬುದನ್ನೂ ಅವರು ಪತ್ತೆ ಹಚ್ಚಿ ಬಿಟ್ಟರೆಂದ ಮೇಲೆ, ನಾವೂ ಕೊಂಚ ತಲೆ ತಗ್ಗಿಸಬೇಕಾದದ್ದೆ ..ಆದರೂ, ಈ ಸಲದ ನವ್ಯಗದ್ಯದ ಅರ್ಥ ಅವರಿಗೂ ಕೊಂಚ ದುಸ್ಸಾಧ್ಯವಾಗಿದೆ ಎಂದು ನಂಬಿ ಅದನ್ನ ಕಳುಹಿಸುತ್ತಿದೇನೆ. ನವ್ಯಕಾವ್ಯದ ಧ್ಯೇಯಗಳಾದ ಕ್ಲಿಷ್ಟತೆ, ಅಸ್ಪಷ್ಟತೆ, ಹಾಹಾಕಾರತೆ, ಅಶಾಂತಿ ಯದ್ವಾತದ್ವತೆ ಗಳನ್ನೇ ಈ ನವ್ಯಗದ್ಯದಲ್ಲೂ ಅನುಸರಿಸಲಾಗಿದೆ].

[ಕಿಪ್ಪು]

ಸಮೂಶಸ್ತ್ರಿ ಕದಡುವುದು ಮುರ್ಯಗೊಂಡ ಜವಾಗಾರರ ಸಂತಾಡೆ ಪೂರ್ಣ ಇರುಕ್ತಿ ನಾಶ ವೇಷದಿಂದಲೇ. ಒಂದು ಪರಿಕ್ಷಣೆ ಕೊಂಕ್ಲೇಷಣಿಯವಾದರೆ, ಮತ್ತೊಂದು ಪುರ್ಮಹಾವೀಜವಾಗಿ ಥಾಂಗೊಳಿಸಲು ಭಟ್ವಾಡಿ ಮಿಸುಲಾಯಿಸುತ್ತದೆ. ದ್ರಂಧಿಪೂರವಾಗಿ ದಂಬಿರುವ ದುಂಡುಭೀನಾದವು ಕ್ಲೀಮೋಸ್ಪಂಚನ ನ್ಯಾಯದಂತೆ ಕೀಣಿಕೀಣಿಯಾಗಿ ಪ್ರತಿಪಟ್ವಾಂಗವೆನಿಸುತ್ತದೆ. ಒಟ್ಟಿನಲ್ಲಿ, ಮೊದಡೆಯ ಕೋಣಾಪ ಕಾಲಗಳ ವಿಷಯವಾಗಿ ನಾವು ಇಷ್ಟು ಸಿಮಿಸಿದರೆ ಹಾಲು. ಕಿಪ್ಪು ಚಿರುಬ ಸಾಣವೂ ಅಲ್ಲ, ಮೂಣವೂ ಅಲ್ಲ; ತ್ರೋೀಹ, ಅಥವಾ, ಕಶ್ರು.

—ಪಾಟಾಳಿ,
ನವ್ಯಗದ್ಯಾಚಾರ್ಯ.

ದೇವರ ಕೃಪೆ

ಯಥಾಪ್ರಕಾರ, ಲೀಲಾ ಅವನ ಕಿವಿಯಲ್ಲಿ ಆ ದಿನ ನಡೆದ ಎಲ್ಲ ಸಮಾಚಾರಗಳನ್ನೂ ತುಂಬುತ್ತಿದ್ದಳು. ಅಫೀಸಿಂದ ಬರುತ್ತಲೂ, ದಿನವೂ ಅವನಿಗಿದೊಂದು ಚಿತ್ರಹಿಂಸೆ. ತನ್ನ ಪಾಲಿಗೆ ತಾನು ಹಾಯವಾಗಿ ಕಾಫಿ ಕುಡಿಯುವಂತಿಲ್ಲ—

"ಶೇಷಮ್ಮನ ಮನೆಗೆ ಹೋಗಿದ್ದೆ,....ಶೇಷಮ್ಮ ಹೆತ್ತಿದಾಳಲ್ಲಾ.... ಗೊತ್ತಿಲ್ಲವೆ, ಶೇಷಮ್ಮ... ನಿಮ್ಮ ಸಾಹೇಬರು ಬೆಂಗಳೂರಲ್ಲಿದ್ದಾಗ,.... ನೀವೇ ಹೇಳಿದಿರಲ್ಲಾ,.... ಶೇಷಮ್ಮನ ಸಮಾಚಾರ...."

"ಹುಂ"

"ಅವಳ ಮನೆಗೆ ಹೋಗಿದ್ದೆ....ಆ ನೈಲಾನ್ ಸೀರೆ. ನೀಲೀದು....ಸ್ಕೈಬ್ಲೂ.... ಅದನ್ನುಟ್ಟುಕೊಂಡು, ಆ ರೋಜಾ ಎಲೆ ಕುಪ್ಪಸ ಪೂನಾದಿಂದ... ನನ್ನ ತಮ್ಮನ ಸ್ನೇಹಿತ ತಂದದ್ದು.... ನೆನಪಿದೆಯೆ?"

"ಹುಂ"

"ಇಲ್ಲ ನಿಮಗೆಲ್ಲಿ ನೆನಪಿರುತ್ತದೆ.... ಕತ್ತಿನ ಹಿಂದೆ ದಾರ.... ಟೇಪು.... ಕಟ್ಟಬೇಕಲ್ಲ.... ನಿಮ್ಮ ಟೈ.... ಬೋಟೈ ಹಾಗೆ ..."

"ಇಲ್ಲ"

"ನೀವೇ ಕಟ್ಟಿದೀರಿ.... ಟೈನ.... ಹತ್ತು ಸಲ.... ನಿಮಗೆಲ್ಲಿ ನೆನಪಿರುತ್ತದೆ . "

"ಇಲ್ಲ"

"ಪಫಿಂಗ್ ಬೇರೆ ಇದೆ ಆ ಕುಪ್ಪಸಕ್ಕೆ...."

"ನೆನಪಿಲ್ಲ, ಕಾಣೆ.... ಹೇಳು ಮುಂದಕ್ಕೆ ."

"ಏನೂ ಇಲ್ಲ.... ಆ ಕುಪ್ಪಸ ತೊಟ್ಟುಕೊಂಡು ಹೋಗೋಣವೇ ಅಂತ.... ಸರಸು ಹೇಳಿದ್ದಳು.... ಆ ನೈಲಾನ್ ಸೀರೆಗೆ ಅದು ಒಪ್ಪುತ್ತೆ ಅಂತ.... ತೆಗೆದೆ, ಅದನ್ನ ಪೆಟ್ಟಿಗೆಯಿಂದ.... ಟೇಬಲ್ ಮೇಲೆ ಇರಿಸಿಕೊಂಡೆ.... ಕನ್ನಡಿ ಮುಂದೆ ನಿಂತೆ...."

"ಹೇಳಿ ಬೇಗ"

"ಆಮೇಲೆ ಏನೋ ಅನ್ನಿಸಿತು.... ಬೇಡ, ಅಂತ, ಅದನ್ನಿಟ್ಟುಬಿಟ್ಟು, ಇಕೋ!.... ಇದನ್ನ.... ನೋಡಿದಿರಾ.... ಈ ಕುಪ್ಪಸ ತೊಟ್ಟುಕೊಂಡು ಹೋದೆ, ಶೇಷಮ್ಮನ ಮನೆಗೆ.... ತಾಳಿ! ಅಷ್ಟರಲ್ಲೇ ಎದ್ದು ಹೋಗಬೇಡಿ.... ಕೇಳಿ, ಮುಂದಿನ ಕಥೇನ....ದೇವರು ನಮ್ಮ ಭಾಗಕ್ಕಿದಾನೆ ಅಂತ ಗೊತ್ತಾಗುತ್ತೆ.... ನೀವು ಹೇಳುತ್ತಿರುತ್ತೀರಲ್ಲಾ, ನಾವೆಲ್ಲ ನಿರ್ಭಾಗ್ಯರು, ದೇವರು ಕೈ ಬಿಟ್ಟುಬಿಟ್ಟಿದಾನೆ ನಮ್ಮನ್ನ, ಅಂತ.... ಇಲ್ಲ, ಅಂದ್ರೆ.... ಇವತ್ತು ದೇವರು ಉಳಿಸಿದರು ನನ್ನ ಮಾನವನ್ನ.... ದೇವರು ಬಂದು ಕಾಪಾಡದೆ ಇದ್ದರೆ, ನಾನು ಇವತ್ತು ಮಾನವಾಗಿ ಆ ಮನೆಯಿಂದ ಹಿಂದಕ್ಕೆ ಬರುತ್ತಾ ಇರಲಿಲ್ಲ, ಕಾಣ್ರಿ"

"ಆ! ಏನಾಯಿತು! ಹಾಳು ಆ ಶೇಷಮ್ಮನ ಗಂಡ ಇದ್ದನೇನು ಮನೆಯಲ್ಲಿ"

"ಛೆ! ಛೆ! ಅಂಥದ್ದೇನೂ ಅಲ್ಲ, ಕಣ್ರಿ! ಬರೀ ಹೆಂಗಸರ ಸಮಾಚಾರ.... ಹೆಂಗಸರ ಗುಂಪಲ್ಲಿ ನನಗೆ ಅಪಮಾನವಾಗಲಿಲ್ಲ, ಅಂದೆ, ಅಷ್ಟೆ...."

"ಹಾಗೆಂದರೆ...."

"ಹಾಗೆಂದರೆ, ಆ ಶೇಷಮ್ಮನ ಮನೆಗೆ ಅವರ ನಂಟರ ಪೈಕಿ ಯಾವುದೋ ಒಂದು ಲಂಕಿಣಿ ಬಂದಿತ್ತು.... ಅದರ ಊರು ಪೂನಾ ಅಂತೆ.... ಅದು ಅಂಥ ಒಂದು ರೋಜಾ ಎಲೆ ಕುಪ್ಪಸ ತೊಟ್ಟುಕೊಂಡಿತ್ತು.... ಪಫಿಂಗ್.... ಬೋಟ್ನೈ ಸಮೇತ"

"ಹುಂ"

"ಹುಂ, ಏನು? ನಾನೂ ಅದೇ ಕುಪ್ಪಸ ತೊಟ್ಟು ಅಲ್ಲಿಗೆ ಹೋಗಿದ್ದರೆ, ಎಂಥ ಅಪಮಾನ ಆಗುವುದು? ನಾನೂ ಅವಳ ಹಾಗೆ ಅಂತ ಅವಳು ತಿಳಿದುಕೊಂಡು ಬಿಟ್ಟಿರುವಳಲ್ಲಾ... "

"ಏಕೆ? ಅವಳ ....ಅವಲಕ್ಷಣದ ಹೆಂಗಸೇನು?"

"ನನಗಿಂತ ದಪ್ಪ"

"ಸಾಧ್ಯವೆ?"

"ಏನಂದಿರಿ? ಕೇಳಿಸಲಿಲ್ಲ. ಸೀರೆ ಕುಪ್ಪಸ ಯಾವುದು ನಾವು ಉಟ್ಟರೂ, ತೊಟ್ಟರೂ, ನಮ್ಮದೇ ಪ್ರತ್ಯೇಕ ಆಗಿರಬೇಕು. ಮತ್ತೊಬ್ಬರು ಆ ಸಭೆಯಲ್ಲಿ ಅಂಥದ್ದು ತೊಟ್ಟಿರಬಾರದು . . ಉಟ್ಟಿರಬಾರದು.... ಅದು ಹೆಂಗಸಿಗೆ ದೊಡ್ಡತನ...."

—ಶ್ರೀ ಕೇಸರಿ.

ಸಾಮಾನ್ಯ ಬೀಡಿ

(ಕುವೆಂಪು ತಾಳ್ಮೆ ಬೇಡಿ)

ಹಿಮ್ಮೇಳವ ರಚಿಸಿರೆ ಸಂಜೆ
(ಸಿಡಲ್ಮಿಂಚಿಗೆ ನಾ ಅಂಜೆ!)
ನೋಡಾಗಿದೆ ಸಗ್ಗಕೆ ಹಾದಿ
ಸಾಧಾರಣ ಬೀಡಿ!

ಬೇರೆಯ ಸಮಯದಿ ಈ ಬೀಡಿ
ತುಟಿಬಿಗಿದಿಹ ಬೇಡಿ;
ಇಟ್ಟಣಿಸಿರೆ ಹೊಗೆ ಬಾಯ್ತುಂಬ;
ಬಿಸಿಮುಸುಡಿಯ ಜಂಬ!
ದುರ್ಯೋಚನೆಗಳು ತುಂಬಿವೆ, ಸಾಮಾನ್ಯ;
ದುರಭ್ಯಾಸಕೆ ಜನ್ಯ!

ಅಭ್ಯಾಸವೆ ಚಟವಾದವನ ಅವಸ್ಥೆ;
ಆಗದೆ ಬರಿದರವಸ್ಥೆ!
ಆದರೆ ಸಂಧ್ಯಾಕಾಲದಲಿ,
(ಜಡೆಮಳೆ ಹಿಡಿದಿರಲಿ)
ಅತಿಸಾಮಾನ್ಯದ ಈ ಬೀಡಿ
ಸೇದ್, ಸ್ವರ್ಗಕೆಹಾದಿ!

—ಹಾ. ರಾ.

ಮಕ್ಕಳ ಶಾಪ

ಮೇಜರ್ ಸಿಂಹರು!....ರಿಟೈರಾದರು ಉಗುರಿಗೆ ಹರಿತ! ಹಲ್ಲಿಗೆ ಚೂಪು!
ಕಣ್ಣಲಿ ಬೆಂಕಿ! ಎದೆಯಲಿ ಲಾವಾ! ನಾಲಗೆ ಉದ್ದಕು ಕೋಪದ ಲೇಪ!
ಎಂಟು ಭಾಷೆಗಳ ಬೈಗಳ ಬಲ್ಲರು, ತುಟಿಗಳ ತೆರೆದರೆ ಈಚೆಗೆ ಬರುವುವು.

ಮಲಯಾದಲ್ಲೂ ಮಲಬಾರಲ್ಲೂ ಸಿಕ್ಕಿಂ ಬರ್ಮಾ ಜಾವಾದಲ್ಲೂ
ಅರಬೀ ಈಗಿಪ್ಟ್ ಮಾಲ್ಟಾದಲ್ಲೂ....ಸಿಂಹರ ಬೆವರೂ ಸಿಂಹರ ರಕ್ತವೂ
ಬಿದ್ದಿವೆ ತುಂಬ.

ಇಂತಹ ವೀರರು ರಿಟೈರಾಗಿ ಬೆಂಗ್ಳೂರಲ್ಲೇ ಬಿಡಾರ ಹೂಡಿ
ದಿನವೂ ಬೆಳಗ್ಗೆ ಲಾಲಾಬಾಗ್ ಗಾಳಿಯ ಸೇವನೆಗೈಯಲು....ಮನೆಯಿಂ
ಹೊರಟರೆ....

ಅಯ್ಯೋ! ನಡೆಯಿತು ಅನಾಹುತವೊಂದು.

ಏನೂ ಇಲ್ಲ ಎಂಥದು ಇಲ್ಲ....ಎಂದಿನ ಹಾಗೆ ಅಂದೂ ಇತ್ತು....ಸಿಂಹರ ನಡಿಗೆ
ಸಾಗಿತ್ತು.

ಆರೋ ಏಳೋ ದೇವರೆ ಬಲ್ಲ, ಅಷ್ಟೇ ವಯಸಿನ ಬಾಲಕಿಯೊಬ್ಬಳು
ಮೇಜರ್ ಸಿಂಹರ ಸನಿಯಕೆ ಬಂದು,
"ಎಷ್ಟಿರಿ ಗಂಟೆ?" ಎಂದಳು ಮೆಲ್ಲಗೆ.

ಸಿಂಹರ ಹಲ್ಲುಗಳೀಚೆಗೆ ಬಂದುವು!
ಉಗುರುಗಳೆಲ್ಲವು "ಪರಚಲೆ?" ಎಂದುವು!
ಬಾಯಿಂ ಲಾವಾ ಉಕ್ಕೇ ಬಂತು, ವಾಕಿಂಗ್ ದೊಣ್ಣೆ ಏರಿತು ಗಗನಕೆ!
ಬೈಗಳ ಜೋಗವು ಹುಡುಗಿಯ ತಾಕಿತು!
ಸಿಂಹರ ಮೆದುಳಿಗೆ (ಆಗಲೆ! ಅಲ್ಲೆ!) ಹುಡುಗಿಯ ಶಾಪದ ಸಿಡಿಲೇ ಬಡಿಯಿತು!
ಟೈಮೇ ತಿಳಿಯದು; ಬೆಳಗೂ ಸಂಜೆ, ನಾಳೆ ನಿನ್ನೆ,....
ಕಾಲವೆ ಮರೆಯಿತು; ತಬ್ಬಿಬ್ಬಾದರು. ಆರಾಗಿದ್ದರೆ ಒಂಬತ್ತೆಂಬರು!
ಎಂಟಕ್ಕೇನೇ ಹನ್ನೆರಡೆಂಬರು, ಭೋಜನ ತಿಂಬರು!
ಕತ್ತಲೆಯಲ್ಲೇ ಐದೆಂದೇಳುತ ವಾಕಿಂಗ್ ಸಿದ್ಧತೆ ಮಾಳ್ಪರು, ಬೆಪ್ಪರು!
ರಿಸ್ಟ್‌ವಾಚ್ನೋಡಲು ಕಣ್ಣಿಗೆ ಮಂಜು! ಮುಳ್ಳುಗಳೆರಡೂ ಸುಳ್ಳೇ ಸೂಚನೆ!
ರೈಲಿಗೆ ಲೇಟು, ಬಸ್ಸಿಗೆ ಲೇಟು, ಎಂಗೇಜ್‌ಮೆಂಟುಗಳೆಲ್ಲಕು ಲೇಟು!
ಹುಚ್ಚೆ? ಪೆಚ್ಚೆ? ಅರಳೆ? ಮರುಳೆ?–ಎಂದರು ಗೆಳೆಯರು ದೂರಕೆ ಸರಿಯುತ.

ಆದುದರಿಂದ ಎಲ್ಲರು ಕೇಳಿ, ಹುಡುಗರು ಗಂಟೆಯ ಕೇಳಲು, ಹೇಳಲು
ನೀವೂ ಹಿಂಜರಿಬಾರದು! ಮಕ್ಕಳ ಶಾಪವು ಮಹಮಹ ಕಂಟಕ.

—ನಾ. ಕ.

ಯಾತ್ರಿಕರ ಪತ್ರ

(೧೧)

ಹರಿಶ್ಚಂದ್ರನ ಕಾಳಗದ ದ್ರೌಪದೀನ ಭಯಂಕರಗೌಡರ ಜೊತೇಲಿ ಕಳುಹಿಸಿದ ನಾನು, ರಾಜ, ಚಂದಿ ರಂಗಸ್ಥಳದ ಚಪ್ಪರದಲ್ಲೇ ರಾತ್ರಿಯ ಮಿಕ್ಕಭಾಗವನ್ನು ಕಳೆದು ನಮ್ಮ ಯಾತ್ರೆ ಮುಂದುವರಿಸಿದೆವು ಸುಮಾರು ಎರಡೂವರೆ ಅಥವಾ ಮೂರು ಮೈಲಿ ಪ್ರಯಾಣ ಮಾಡಿರಬಹುದು – ರಸ್ತೆ ಪಕ್ಕದಲ್ಲಿನ ಒಂದು ಮೈದಾನದಲ್ಲಿ ಒಂದು ಬಾವಿಯ ಹತ್ತಿರ ಮಾರಾಮಾರಿ ಕೂಗಾಟಗಳಾಗುತ್ತಿತ್ತು. ಅಲ್ಲಿಗೆ ಹೋದೆವು. ಸುಮಾರು ಇಪ್ಪತ್ತು ಜನ ಸೇರಿದ್ದಾರೆ–ಗಂಡಸರು ಹೆಂಗಸರು ಸೇರಿ. ನೋಡಿದರೆ ಎರಡು ಪಂಗಡಗಳಿವೆ. ಒಂದುಕಡೆ ಬಾವಿಯ ರಾಟೆ, ಹಗ್ಗ ಇವೆ. ಸುತ್ತಲೂ ಖಾಲಿ ಮಡಿಕೆಗಳು, ಬಿಂದಿಗೆಗಳು ಬಿದ್ದಿವೆ. ಜೋರಾಗಿ ಜೈದಾಟವಾಗುತ್ತಿದೆ.

ನಾನು ರಾಜ ಚಂದಿ ಬಾವಿಯ ಹತ್ತಿರ ಹೋಗಿ ಜನರ ಮಧ್ಯೆ ನಿಂತೆವು. ಅವರೆಲ್ಲಾ ಹಿಂದಕ್ಕೆ ಸರಿದರು.

ನಾನು ಕೇಳಿದೆ—"ಏನ್ರಯ್ಯಾ ಜಗಳ?" ಅಂತ.

"ನೀರಿಗೆ ಸ್ವಾಮಿ" ಅಂದ ಒಬ್ಬಾತ.

"ನೀರಿಗ್ಯಾಕಪ್ಪಾ ಜಗಳ?" ಅಂದೆ.

ಆಗ ಬಲಗಡೆಯವನು ಬಂದು "ನೋಡಿ ಬುದ್ಧಿ– ಈ ಜನ– (ಎಡಗಡೆಯವರನ್ನು ತೋರಿಸಿ) ಈ ಬಾವ್ಯಾಗೆ ನೀರ್ಸೇದ್ಕೋಬೇಕಂತೆ!" ಅಂದ.

"ಸೇದ್ಕೊಳ್ಳಿ – ನಿಂಗೇನು?" ಅಂದೆ.

ಆಗ ಎಡಗಡೆಯವನು ಮುಂದೆ ಬಂದು—"ಬುದ್ಧಿ. ನಮಗೆ ಬೇರೆ ನೀರಿಲ್ಲ-ಕುಡಿಯೋಕೆ. ಈ ಬೊಡ್ಡಿಯಾಳುಗಳು ನಮಗೆ ನೀರೆಳಿಯೋಕೆ ಬಿಡಾಕಿಲ್ಲ, ನೋಡಿ" ಅಂದ.

ಆತನ ಕಣ್ಣಲ್ಲಿ ನೀರೂರಿತ್ತು.

ನಾನು ಬಲಗಡೆ ಇದ್ದ ಬೊಡ್ಡಿಯಾಳಿನ ಕಡೆ ತಿರುಗಿದೆ. ಆತ "ಸ್ವಾಮಿ—ಈ ಬಾವಿ ನಮ್ದು. ಈ ಎಡಗೈ ಜನಕ್ಕೆ ಇದರಾಗಿಂದ ನೀರೆಳೆಯೋಕೆ ಬಿಡಾಕಿಲ್ಲ" ಅಂದ.

ಎಡಗೈಯಾತ — "ದೇವರು ಕೊಟ್ಟಾಂಗೆ ನಮಗೆ ಅಳ್ಳ ಇತ್ತು. ಈಗ ಬತ್ತೋಯ್ತು. ಇಲ್ದಿದ್ರೆ ನಾವು ಈ ಬೊಡ್ಡಿಯಾಳಿನ ಬಾಮೀಗೆ ಬರ್‍ಬೇಕಿರ್‍ಲಿಲ್ಲ" ಅಂದ.

ನನಗೆ ಯಾವುದೂ ಅರ್ಥವಾಗಲಿಲ್ಲ.

"ಅದಿರಲಿ–ನೀವು ಯಾವ ಜಾತಿ ಅಂದೆ.

ಮೊದಲನೆಯವ "ನಾವೆಲ್ಲಾ ಬಲಗೈಯ್ಯೋರು. ಆ ಬೇವಾರ್ಸಿಗಳೆಲ್ಲಾ ಎಡಗೈಯ್ಯೋರು. ಅವರು ಮುಟ್ಟಿದ್ನೀರು ನಾವು ಉಣ್ಣಾಕಿಲ್ಲ. ಎಂದಿಗೂ ಉಣ್ಣಲ್ಲ. ಅವ್ರು ಬೇಕಾದರೆ ಬೇರೆ ಬಾವಿ ತೋಡ್ಕೊಳ್ಳಿ" ಅಂದ.

ನನಗೆ ದಿಕ್ಕು ತೋಚದಾಯಿತು. ಆದರೂ ಹೇಳಿದೆ—

"ಅಲ್ರಪ್ಪಾ– ನಮ್ಮ ಸರ್ಕಾರ –ಮೇಲಾಗಿ ಗಾಂಧೀಜಿಯವರು– ಅವರ ಹೆಸರು ಕೇಳಿದ್ದೀರಾ?—"

"ಊಂ ಸ್ವಾಮಿ" ಅಂತ ಕೈ ಮುಗಿದ.

"—ಗಾಂಧೀಜೀಯುವರು ತಮ್ಮ ಆಯುಸ್ನೆಲ್ಲಾ ನಿಮ್ಮ ಉದ್ಧಾರಕ್ಕಾಗಿ ಖರ್ಚು ಮಾಡಿದರು. ಈಗ ನಮ್ಮ ನಾಯಕರೆಲ್ಲಾ ನಿಮ್ಮನ್ನ ಉದ್ಧಾರ ಮಾಡ್ತೀವೆ ಅಂತ ಎದೆ ತಟ್ಕೊಳ್ತಾ ಮಿಕ್ಕೋರ್‍ನೆಲ್ಲಾ ಧಿಕ್ಕಾರ ಮಾಡ್ತಾ ಇದ್ದಾರೆ. ದೇವಸ್ಥಾನಗಳನ್ನೆಲ್ಲಾ ನಿಮಗಾಗಿ ತೆಗೆಸುತ್ತಿದ್ದಾರೆ. ಹಾಗಿರೋವಾಗ ನೀವು ನಿಮ್ಮ ನಿಮ್ಮಲ್ಲೇ ದೇವರು ಕೊಟ್ಟ ನೀರಿಗಾಗಿ ಹೊಡೆದಾಡುತ್ತಿದ್ದೀರಲ್ಲಾ! ಇದರಿಂದ ನಿಮ್ಮ ನಾಯಕರಿಗಲ್ಲದೆ–ದೇವರಿಗೇ ಅನ್ಯಾಯ ಮಾಡಿದ ಹಾಗಲ್ವೇನ್ರಯ್ಯಾ?" ಅಂದೆ.

ಬೆವರು ವರಸಿಕೊಳ್ಳಲು ಚಂದಿ ಟವಲು ಕೊಟ್ಟ. ವರಸಿಕೊಂಡೆ.

ಆತ ಅದಕ್ಕೆ—"ಅದೆಲ್ಲಾ ನಮಗೆ ಗೊತ್ತಿಲ್ಲ. ಆ ಜನ ಮುಟ್ಟಿದ ನೀರು ನಾವು ಕುಡಿದರೆ ನಮ್ಮ ಈರವ್ವ ನಮ್ಮನ್ನ ಕಾಡದೇ ಬಿಟ್ಟಾಳಾ? ವಾದೋರ್ಸ ಯಿಂಗೇ ಆಗಿ ಎಲ್ಡು ಪ್ರಾಣ ಕಡದೊ. ಅದು ತಿಂದೊರ್ಗೂ ಕಾಟ ಬಂದು, ವಾಂತಿ ಅತ್ಕೊಂಡು ನಮ್ಮೋರು ಜನ ಸತ್ರು. ಈ ಸಾರಿ ಕಂಡಿತ್ಗೂ ನಾವು ಬಿಡಾಕಿಲ್ಲ. ನಿಮ್ಮ ಸಾಯೋರೆಲ್ಲಾ ಸೇರ್‍ಕಂಡು ಅವರಿಗೆ ಬ್ಯಾರೆ ಬಾವಿ ತೋಡಿಸ್ಲಿ. ನಾವಂತೂ–ಊಹುಂ!" ಅಂದ.

ನಾವು ಪೆಚ್ಚಾದೆವು.

ಚಂದಿ—"ಲೋ–ಈ ಸಮಸ್ಯೆ ಜಿನಿವಾಕ್ಕೆ ಕಳಿಸ್ಬೇಕು" ಅಂದ.

ರಾಜ—"ಹೌದು. ಡಲ್ಸ್ನೋ ಮಾಲಟಾಫ್ಷೋ ಬರಬೇಕು" ಅಂದ.

ನನಗೆ ಈ ಸಮಸ್ಯೆ – ಇಂಡೋಚೈನ – ಕೊರಿಯಾಗಳಿಗಿಂತ ವಿಪರೀತವಾಗಿ ಕಂಡಿತು.

ಚಂದಿ—" There is something wrong–ಈ Problem – foundation – ಅಂದ್ರೆ – fundamentals ನಿಂದ solve ಆಗಬೇಕಯ್ಯ" ಅಂದ.

ರಾಜ "ಇದು ರಾಜಕೀಯದ ಬಾಬತ್ತಾಗೋಕೆ ಬದಲು–ಈ ಜನರ ಮೂಢತ್ವ bigotry– ಹೋಗಲಾಡಿಸಿ– Educate ಮಾಡಬೇಕು. ಆಮೇಲೆ Honest Mass-Contact "

ನಾನಂದೆ— "ಬಿಡೋ – Educated among them – ವಿದ್ಯೆ ಕಲಿತೋರು ಈ ಜನದ ಜೊತೆ ಸೇರೊಲ್ಲ. ಅವರು ಹೆಚ್ಚು ಅಂತಸ್ತು ಹುಡುಕಿ ಸೇರಿಕೊಂಡು, ಇವರ ಹೆಸರಿನಲ್ಲಿ ಹೊಡೆದಾಡಿ ತಮ್ಮ ಸ್ಥಾನ ಭದ್ರ ಮಾಡಿಕೊಳ್ತಾರೆ– ಅಷ್ಟೆ. so much so – status quo! ಅವರದೇ ತಪ್ಪಿಗಾಗಿ ಪ್ರಪಂಚದ ಮೇಲೆಲ್ಲಾ ಬೆಂಕಿ ಕಾರುತ್ತಾರೆ" ಅಂತ.

ರಾಜ ಅಂದ "ನಾ ಹೇಳಿಲ್ವೇನಯ್ಯಾ?— ನಮ್ಮ ಭಾವ ಹೇಳ್ದಾಗೆ social Revolution! That is the solution!" ಅಂತ ಪ್ರಾಸಹಾಕಿ.

ಬಾಯಾರಿಕೆಯಾಗಿತ್ತು.

"ನಿಮ್ಮ ಜಗಳ ಹೇಗಾದರೂ ಆಗಲಿ. ನಮಗೆ ಕುಡಿಯೋಕೆ ಯಾರಾದರೂ ನೀರುಕೊಡಿ" ಅಂತ ಅಲ್ಲಿದ್ದ ಜನರನ್ನೇ ಕೇಳಿದೆ.

ಎಲ್ಲರೂ ಹಿಂದಕ್ಕೆ ಸರಿದರು.

ಆಗ ನಾನು— "ಬನ್ನೀಪ್ಪಾ – ನಮಗೇನೂ ನಿಮ್ಮ ಈರಪ್ಪನ ಹೆದರಿಕೆ ಇಲ್ಲ. ನಾವು ಈರಪ್ಪನ ಮಕ್ಳು. ಯಾರಾದರೂ ಕೊಡಿ. ಕುಡೀತೇವೆ" ಅಂದೆ.

ಅರ್ಧ ಘಂಟೆ ಪುಸಲಾಯಿಸಿದ ಮೇಲೆ—ಒಬ್ಬಾತ – ನಡುಗುವ ಹಸ್ತದಿಂದ ನೀರು ಕೊಟ್ಟ. ಕುಡಿದೆವು. ಬಾವಿಯಿಂದ ತುಸದೂರ ಕುಳಿತೆವು.

ರಾಜ—"ನಾನೇನೋ ರಾಜಕೀಯಕ್ಕಿಳೀತೇನೆ" ಅಂದ.

ಚಂದಿ "ಹಾಗೇಂತ ನಾನೂ ಎಂದೋ ನಿರ್ಧಾರ ಮಾಡಿದ್ದೇನೆ. ತಲಕಾಡಿಗೆ ಹೋಗಿ ಬಂದಮೇಲೆ–ಡಿಟೋ" ಅಂದ.

ನಾನೇನಾದರೂ ಹೇಳಬೇಕಾಯಿತು.

"ನನಗೆ ರಾಜಕೀಯ ಬೇಡ" ಅಂದೆ.

ಚಂದಿ—"ನಾ ಹೇಳ್ಳಿಲ್ವೇ– chicken hearted ಅಂತ? After all– ಏನು ಬೇಕಯ್ಯಾ ಅದಕ್ಕೆ qualification? ಒಂದು ನಾಕ್ಕೈದು ಖಾಯಂ Phrases-Vote winners! . "

ರಾಜ—"for Example—'ಬಡ ಬೋರೇಗೌಡ'...."

ಚಂದಿ— "yes– 'ಬಡಬೋರೇಗೌಡ!' Damn him! 'ಬಡ' ಅನ್ನೋದನ್ನ ನೀಲಾಂಬರೀಲೂ, 'ಬೋರೇ' ಅನ್ನೋದನ್ನ ತೋಡೀಲೂ, 'ಗೌಡ' ಅನ್ನೋದನ್ನ ಕಾನಡದಲ್ಲೂ ಉಚ್ಚಾರಮಾಡಿ, ಸಾವೇರೀಲಿ ಕಣ್ಣಾ ನೀರು ಸುರಿಸಿದಾಂದ್ರೆ— ಬಡಾಯಿ ಬೋರೇಗೌಡ್ರೆಲ್ಲಾ ನೇಣು ಹಾಕ್ಕೋಬೇಡವೆ?" ಅಂದ.

ರಾಜ— "ಅಷ್ಟೇ ಅಲ್ಲ - ಭೂದಾನ! ಜಮೀನುದಾರರೆಲ್ಲಾ ತಮ್ಮ ಪಾಳು ಬಿದ್ದಿರೋ ಭೂಮೀನೆಲ್ಲಾ-ಅಲ್ಲಿ ಲಾಂಟಾಣಾಗಿಡ ಬೆಳೆಯೊಲ್ಲ- sahara desert! ಇಲ್ಲಿ - central - Africa Jungle! - ಅವೆಲ್ಲಾ ದಾನಮಾಡಿ ಬಿರುದು ಪಡೀಬೇಡವೇ?" ಅಂದ.

ಚಂದಿ –"ಆಮೇಲೆ Prohibition! ತಕೋ! ಪಾನನಿರೋಧ! ಅದೊಂದೇ ಸಾಕಯ್ಯಾ—Trumpet! ಈಗ ಕಳ್ಳಭಟ್ಟಿ ಇಳಿಸೋರೆಲ್ಲಾ ನಮಗೇ ಮತದಾನ ಮಾಡಿ - Lower House ನಾವೇ - Upper House ನಾವೇ. ಮಂತ್ರಿ ಪದವಿ ನಮ್ಮ ಜೇಬಿನಲ್ಲೇ!" ಅಂದ.

ರಾಜ "Temple Entry! ಪೂಜಾರಿಗಳೇನು? ದೇವರುಗಳು ಕೂಡ ಹೆದರಿ ನಮ್ಮಿಂದ ಈ ಜಗಳಾನೇಬೇಡ. ನೀವು ಕಟ್ಟಿಸಿದ ದೇವಸ್ಥಾನ ನೀವೇ ಇಟ್ಟುಕೊಳ್ಳಿ. ಅಂತ ಗರ್ಭಗುಡಿ ಬಿಟ್ಟು ಹೊರಗೆ ಬಂದು ಕಾಡುಗಳನ್ನ ಸೇರಿಕೋಬೇಡವೇ?" ಅಂದ.

ಚಂದಿ "ಸಂಸ್ಕೃತಿಪ್ರಚಾರ!...."

"S T O P ! !" ಅಂದೆ.

ವಿಪರೀತಕ್ಕೇರಿತು. ಬಾವಿಯನ್ನು ಬಿಟ್ಟು ಜನ ನಮ್ಮಸುತ್ತ ನಿಂತಿದ್ದರು. ಅಷ್ಟರಲ್ಲಿ ಬಹಿಷ್ಕರಿಸಲ್ಪಟ್ಟಿದ್ದ ಜನ ನೀರು ಎಳಿಯುಕ್ಕೆ ಷುರು ಹಚ್ಚಿದ್ದರು. ಅದನ್ನು ನೋಡಿ ನಮ್ಮ ಹತ್ತಿರವಿದ್ದವರು—

"ಎಲಾ ಇವರ ಮನೆ.... ...!" ಅಂತ ಓಡಿದರು ಬಾವಿಯ ಕಡೆ.

ನಾವು ಎದ್ದು ನಮ್ಮ ದಾರಿ ಹಿಡಿದೆವು.

ನಾನಂದೆ— "ಲ್ರೋ ರಾಜ – ಚಂದಿ – ಎಲ್ಲಾ ಆಯ್ತು. ಅನ್ನ ಬಟ್ಟೆ ವಿಚಾರವೇನಯ್ಯಾ - ನಿಮ್ಮ ನಾಯಕತ್ವದಲ್ಲಿ?" ಅಂತ.

"ಅವು ಬಿಡಯ್ಯಾ – ನೀವುಂಟು - ಅಂಗ್ಡಿ ಉಂಟು! But - ಅವೇ ನಮಗೆ - ಅಂದ್ರೆ - ಮುಂದೆ - Income! I mean Taxes ತರೋವು" ಅಂದ ಚಂದಿ.

"ಸಾರ್ಥಕವಾಯ್ತು" ಅಂದುಕೊಂಡೆ.

— "ಶೇಷ"



ಮುಂದಕ್ಕೆ ಕೋಲಾರ ಆಂಧ್ರರಿಗೆ ಸೇರುತ್ತೋ — ಮೈಸೂರಿಗೆ ಉಳಿಯುತ್ತೋ ಅದು ತಿಳಿಯದೇನೇ, ನಿಮಗೆ, ನಿಮ್ಮೂರಲ್ಲಿ ಏನು ಭಾಷಣಮಾಡಬೇಕೋ ಅನ್ನೋದೇ ಬಲು ತೊಂದ್ರೆ ಅಲ್ಲವೇನ್ರೀ?....

''ಎಂದಳಾ ಕೊರವಂಜಿ ಕಾಯುವಪರಂಜಿದೇವಿ''

ಬಸ್ಸೆಲ್ಲನೀವೆ; ಬಸ್ಸಿನೊಳಗಣ ಸೀಟೆಲ್ಲ ನೀವೆ. ರೈಲೆಲ್ಲ ನೀವೆ; ರೈಲಿನೊಳಗಣ ಬೆಂಚೆಲ್ಲ ನೀವೆ ಪಿತೃಸಂಕುಲವೆ; ಮಾವ ಗಡಣವೆ, ಅರ್ಜಿಗಳೆ, ಶಿಪಾರ್ಸುಗಳೆ, ಮಗನಿಗೊಂದು ಸೀಟು, ಅಳಿಯನಿಗೊಂದು ನೌಕರಿ, ಭಾವಮೈದುನಗೊಂದು ಪರದೇಶ ಪ್ರಯಾಣ ಎಂದೊರಲುವಿರಿ, ಇಂದಲೆಯುವಿರಿ ನಾಳೆ ಮರಳುವಿರಿ, ಸುಮ್ಮನಿರೆಂದಳು ಕೊರವಂಜಿ ಕಾಯುವಪರಂಜಿದೇವಿ.

ನಾಲಗೆ ಕೆರೆದರೆ ಬೈಗುಳ; ತಲೆಯು ಕೆತಿದರೆ ತಂತ್ರ; ಕಾಲ ಕೆರೆದರೆ ಜಗಳ; ಹೆಕ್ಕತ್ತ ಕೆರೆದರೆ, ನಾಚಿಕೆ; ಅಂಗೈ ಕೆರೆದರೆ ಲಂಚ; ಕೆರೆ ಕೆರೆದು ತಳವನೇ ಕೆರೆದು, ತಿರಿದುಂಬ ಹುಂಬನೇ ಹೋಗೆಂದಳು ಕೊರವಂಜಿ ಕಾಯುವಪರಂಜಿದೇವಿ.

ಅವರಿವರಿಗೆ ಲಗ್ನವಾಯಿತೆಂದು ನಿನ್ನ ಮನ ಭಗ್ನವಾಯಿತೆ? ಮೂಢಾ. ಊರೂರು ಅಲೆದಾಡಿ ಹೆಣ್ಣ ಹೆತ್ತವರ ಕಾಡಿಸಿ ಪೀಡಿಸಿ ವರದಕ್ಷಿಣೆಗಾಗಿ ಕೈ ನೀಡಿ ಬೈದಾಡಿ, ಕಾಂಚನಕ್ಕಾಗಿ ಕಾಮಿನಿಯ ಪಡೆದ ಹುಡುಗರ ನೋಡಿ ನೀನೇಕೆ ಕೊರಗುವೆ, ಮೂಢಾ, ಸುಮ್ಮನಿರು ಎಂದಳು ಕೊರವಂಜಿ ಕಾಯುವಪರಂಜಿದೇವಿ.

ಎನಿಸುಕಾಲ ಕಲ್ಲು ನೀರೊಳಗಿದ್ದರೇನು? ಹುಲ್ಲು ಸಿಂಹದ ಬೋನೊಳಗಿದ್ದರೇನು? ನೆನೆದು ಮೃದುವಾಗಬಲ್ಲುದೆ? ಮೆಲಿದು ಮೈಯಾಗಬಲ್ಲುದೆ? ಎನಿತುಕಾಲ ಹೈದ ಕಾಲೇಜಲಿದ್ದರೇನು? ಓದಿ ಪಾಸಾಗಬಲ್ಲನೆ? ಕೊಂಕುಳಲ್ಲಿ ಹೊತ್ತಿಗೆಯಿಲ್ಲದನ್ನಕ್ಕ, ಕಣ್ಣಲ್ಲಿ ಕನ್ನಡಕವಿಲ್ಲದನ್ನಕ್ಕ, ಕೊರಡಿಯೊಳಗಿಂದ ಇಸ್ಪೀಟು ಮಾಯವಾಗದಿರುವನ್ನಕ್ಕ, ಪಾಸೆಲ್ಲಿಂದ, ಬಿರುದೆಲ್ಲಿಂದ, ಕೇಳಿದಳು ನಮ್ಮ ಕೊರವಂಜಿ ಕಾಯುವಪರಂಜಿದೇವಿ.

ಕುದುರೆಯನೇಸು ತಿಕ್ಕಿದರೇನು? ಮೈದಾನವನೇಸು ಮಾಲೀಸು ಮಾಡಿದರೇನು? ಅದರಮೇಲೆ ಏಸು ಗಂಟನ್ನಿರಿಸಿದರೇನು? ಓಡು ಓಡು ಎಂದು ನಾಡೆಲ್ಲ ಕೂಗಿದರೇನು? ಕುದುರೆಯೊಳಗಣ ಕೆಮ್ಮು ಹೋಗದೆ, ಹುಮ್ಮು ಹುಟ್ಟುವುದೆ, ಶಂಕಿಸಿದಳು ಕೊರವಂಜಿ ಕಾಯುವಪರಂಜಿದೇವಿ

ಕಾಲಗರ್ಭದಲ್ಲಿ

—— o ——

ಪುರಾಣೇತಿಹಾಸಗಳಲ್ಲಿ ಆರ್ಯಾವರ್ತ ಎಂಬ ಹೆಸರಿನಿಂದ ಪ್ರಸಿದ್ಧವಾದ ಪ್ರದೇಶದಲ್ಲಿ ದೊಡ್ಡ ಸಕ್ಕರೆ ಕಾರ್ಖಾನೆಯ ಸ್ಥಾಪನೆಗಾಗಿ ತಳಪಾಯವನ್ನು ಕೆಲವು ತಿಂಗಳ ಹಿಂದೆ ಅಗೆಯುತ್ತಿದ್ದರು. ಅಗೆಯುತ್ತಿದ್ದಾಗ ಭಸ್ಮತುಂಬಿದ ಕುಂಭವೂ ಅದರ ತಳಗೆ ಓಲೆ ಗ್ರಂಥವೂ ಸಿಕ್ಕಿದುವು. ಪಂಡಿತರು ಶ್ರಮವಹಿಸಿ ಗ್ರಂಥದ ಅರ್ಥವನ್ನು ಬರೆಯುತ್ತಿದಾರೆ. ಗ್ರಂಥ ಅಮೂಲ್ಯವಾದ ಪುರಾಣವೆಂದೂ, ತಮ್ಮ ಕಾರ್ಯ ಪೂರ್ಣವಾಗಬೇಕಾದರೆ ಅನೇಕ ವರ್ಷಗಳು ಕಳೆಯಬೇಕೆಂದೂ ಈ ಪಂಡಿತರು ಹೇಳುತ್ತಾರೆ. ಸಾಮಾನ್ಯ ಜನರ ಅನುಕೂಲಕ್ಕೋಸ್ಕರ ಆ ಗ್ರಂಥದ ಅರ್ಥಮಾಡಿರುವ ಭಾಗದ ಸಾರಾಂಶವನ್ನು ಇಲ್ಲಿ ಕೊಟ್ಟಿದೆ.

* * *

ಸುಮಾರು ಎರಡುಸಾವಿರ ವರ್ಷಗಳ ಹಿಂದೆ ರಾಕ್ಷಸರು ಭೂಮಾರ್ಗವಾಗಿಯೂ ಸಮುದ್ರಮಾರ್ಗವಾಗಿಯೂ ದಂಡೆತ್ತಿ ಬಂದು, ಭರತಖಂಡವನ್ನೆಲ್ಲ ಗೆದ್ದು ಆಳತೊಡಗಿದರು. ಕುಯುಕ್ತಿಯಿಂದ ಕೆಲವು ದೇಶೀಯರಿಗೆ ರಾಜಮರ್ಯಾದೆಮಾಡಿಯೂ, ಕೆಲವರಿಗೆ ಭೂದಾನ, ಕೆಲವರಿಗೆ ಹಿರಣ್ಯದಾನ ಮಾಡಿಯೂ, ಒಲಿಸಿಕೊಂಡು ಆಳುತಿದ್ದರು. ನೂರಾರು ವರ್ಷಗಳು ಉರುಳಿದುವು. ಯುದ್ಧ ಅತಿಕ್ರಮಣಗಳ ಭಯ ತಪ್ಪಿತು. ದೇಶದಲ್ಲೇನೋ ಶಾಂತಿ ಭದ್ರತೆ ಇದ್ದುವು. ಆದರೆ ರಾಕ್ಷಸರು ಜನರಿಗೆ ಗೋಚರವಾಗದಂತೆ ಅವರ ರಕ್ತವನ್ನು ಸ್ವಲ್ಪ ಸ್ವಲ್ಪವಾಗಿ ಹೀರುತ್ತಾ ಬಂದರು. ಸುರಕ್ಷಣೆಯ ಅಮಲಿನಲ್ಲಿ, ತಮ್ಮ ದಾರಿದ್ರ್ಯ, ನಿರಕ್ಷರತೆ, ಮೌಢ್ಯಗಳು ದಿನೇ ದಿನೇ ಹೆಚ್ಚಾಗುತ್ತಿದ್ದುದನ್ನೂ ತಾವು ಜೀವಚ್ಛವಗಳಾಗುತ್ತಿದ್ದುದನ್ನೂ ಸಾಮಾನ್ಯರು ಅರಿಯದಾದರು. ರಾಜಾಶ್ರಯ ಸಿಕ್ಕಿದವರು ಸ್ವಜನರನ್ನು ಮರೆತು ದಾಸ್ಯದಲ್ಲೇ ಸೌಖ್ಯಕ್ಕೂ ಶ್ರೇಯಸ್ಸಿಗೂ ಗಾಳಹಾಕುತ್ತಿದ್ದರು. ಸಾಹಿತ್ಯ, ತತ್ವ, ಮತಗಳ ದಿವ್ಯಜ್ಯೋತಿಯನ್ನು ಬೆಳಗಿದ್ದ ಭರತಖಂಡದ ಜನರು ನಿರ್ವೀರ್ಯರೂ ನಿಸ್ತೇಜರೂ ಆದರು. ಅರಸರಾದ ರಾಕ್ಷಸರಂತೆ ವಿಷಯಲೋಲುಪರಾಗಿ ಧರ್ಮವನ್ನು ಮರೆತರು.

ಆಗ, ಮಾನವಕುಲದ ಸಂರಕ್ಷಣೆಮಾಡುವುದಕ್ಕೂ, ಧರ್ಮಸಂಸ್ಥಾಪನೆ ಮಾಡುವುದಕ್ಕೂ ಮಹಾತ್ಮನೊಬ್ಬನು ಭರತಖಂಡದಲ್ಲಿ ಜನ್ಮತಾಳಿದನು. ಆತನ ಜನ್ಮಸ್ಥಳ ಶ್ರೀಕೃಷ್ಣಪರಮಾತ್ಮನ ರಾಜಧಾನಿಯಾಗಿದ್ದ ದ್ವಾರಕೆಯ ಸಮೀಪದ ಗ್ರಾಮ. ಕಾಲ

ಕ್ರಮದಲ್ಲಿ ಆತನು ವಿದ್ಯಾಭ್ಯಾಸವನ್ನು ಮುಗಿಸಿ, ಹರಿದಾಸರಿಗೆ ಯೋಗ್ಯವಾದ ರೀತಿಯಲ್ಲಿ ದೇಶಾಟನೆಯನ್ನು ಕೈಗೊಂಡನು. ಸಂಚಾರಕಾಲದಲ್ಲಿ ಜನರ ದಾರಿದ್ರ್ಯ: ಸ್ವಾರ್ಥಪರತೆ, ಹಗೆತನ, ದುಃಖಗಳನ್ನು ನೋಡಿ ಮನಕರಗಿತು. ಭಾರತವನ್ನು ರಾಕ್ಷಸ ಭಾಧೆಯಿಂದ ಬಿಡುಗಡೆಮಾಡಿ, ಜನರಲ್ಲಿ ಅನ್ಯೋನ್ಯತೆಯನ್ನೂ ಪ್ರಪಂಚದಲ್ಲಿ ಶಾಂತಿಯನ್ನೂ ಸ್ಥಾಪಿಸಬೇಕೆಂದು ನಿರ್ಧರಿಸಿ, ಉಪವಾಸವ್ರತದಿಂದ ಬಾಹ್ಯಾಂತಶ್ಯುದ್ಧಿ ಹೊಂದಿ, ನದೀತೀರದಲ್ಲಿ ಕುಟೀರವನ್ನು ಕಟ್ಟಿಕೊಂಡು ದೀರ್ಘಕಾಲ ತಪಸ್ಸುಮಾಡಿದನು. ಅವನ ತಪೋಭಂಗಕ್ಕಾಗಿ ರಾಕ್ಷಸರು ಮಾಡಿದ ಪ್ರಯತ್ನಗಳೆಲ್ಲ ನಿಷ್ಫಲವಾದುವು. ಶ್ರೀಮನ್ನಾರಾಯಣನು ಸುಪ್ರೀತನಾಗಿ ಆ ಮಹಾತ್ಮನ ಉದಾತ್ತ ಧ್ಯೇಯ ಸಾಧನೆಗೆ ಅನುಕೂಲವಾದ ಜ್ಞಾನ ಸಾಮರ್ಥ್ಯಗಳನ್ನು ದಯಪಾಲಿಸಿದನು .ತರುವಾಯ ಋಷಿಯು ಪುನಃ ಸಂಚಾರವನ್ನು ಕೈಗೊಂಡನು. ಎಲ್ಲೆಲ್ಲೂ ಜನರು, ಕುಲಜಾತಿಗಳೆನ್ನದೆ, ಎಣಿಸಲಾಗದ ಸಂಖ್ಯೆಯಲ್ಲಿ ಶಿಷ್ಯರಾದರು, "ಸತ್ಯವನ್ನೇ ನುಡಿಯೋಣ; ಧರ್ಮವನ್ನೇ ಆಚರಿಸೋಣ; ಅಹಿಂಸೆಯನ್ನೇ ಅನುಷ್ಠಿಸೋಣ; ಸರ್ವರ ಕ್ಷೇಮಕ್ಕಾಗಿ ಸ್ವಾರ್ಥತ್ಯಾಗಮಾಡೋಣ; ಒಟ್ಟಿಗೆ ಬಾಳಿ, ಅನುಭೋಗಿಸಿ, ಪರಸ್ಪರ ದ್ವೇಷಿಸದೆ ಪ್ರೀತಿಸೋಣ; ನಿರ್ಭೀತರಾಗಿರೋಣ" ಮೊದಲಾದ ಉಪನಿಷದ್ವಾಕ್ಯಗಳನ್ನು ಘೋಷಿಸುತ್ತ ಜನರನ್ನು ಒಂದುಗೂಡಿಸಿ, ಅವರ ನಾಡಿಯಲ್ಲಿ ಹೊಸ ಚೈತನ್ಯವನ್ನು ಹರಿಸಿದನು. ಈ ಮಹಾತ್ಮನ ತೇಜಸ್ಸಿಗೆ ಹೆದರಿ ರಾಕ್ಷಸರು ಓಡಿಹೋಗಿ ಪಶ್ಚಿಮ ಸಮುದ್ರದಲ್ಲಿ ಅವಿತುಕೊಂಡರು.

ದೇಶವನ್ನು ಸುಭದ್ರವಾದ ಅಸ್ತಿಭಾರದಮೇಲೆ ಪುನಃ ನಿರ್ಮಿಸಬೇಕೆಂದೂ ದಾರಿದ್ರ್ಯವನ್ನು ತೊಡೆದುಹಾಕಿ, ವಿದ್ಯಾಪ್ರಸಾರವಮಾಡಿ, ಸರ್ವರೂ ಸುಖವಾಗಿರುವಂತೆ ಮಾಡಬೇಕೆಂದೂ ಪಂಡಿತರಾದ ಮಹಾತ್ಮನ ಸಾಕ್ಷಾತ್ ಶಿಷ್ಯರು ಆಲೋಚಿಸಿದರು. ಅದಕ್ಕಾಗಿ ಮಹಾತ್ಮನನ್ನೇ ಋತ್ವಿಜನನ್ನಾಗಿ ಇಟ್ಟುಕೊಂಡು ಮಹಾಯಾಗವನ್ನು ಪ್ರಾರಂಭಿಸಿದರು. ಯಾಗವನ್ನು ಕೆಡಿಸಬೇಕೆಂದು ರಾಕ್ಷಸರು ಹಿತಚಿಂತಕರಂತೆ ವೇಷಹಾಕಿಕೊಂಡು ಬಂದು, ಮೂಢರನ್ನು ಆರಿಸಿ, "ಈ ಆಷಾಢಭೂತಿ ಯಾಗದ ನೆಪದಿಂದ ದೇಶವನ್ನೆ ಸುಡುತ್ತಾನೆ, ನೀವೆಲ್ಲ ಬೂದಿಯಾಗುತ್ತೀರಿ" ಎಂದು ಮಂಕುಬೂದಿ ಎರಚಿ ಅವರಲ್ಲಿ ಭಯಹುಟ್ಟಿಸಿದರು. ಆ ಮೂಢರು ಸಮಯನೋಡಿ ಮಹಾತ್ಮನನ್ನು ಯಜ್ಞಕುಂಡದೊಳಕ್ಕೆ ನೂಕಿಬಿಟ್ಟರು. ತದನಂತರ ರಾಕ್ಷಸರು ತಿರುಗಿ ತಮ್ಮ ಉಪಟಳವನ್ನು ಪ್ರಾರಂಭಿಸಿದರು.

ಓಡಿಹೋಗುವಾಗ ರಾಕ್ಷಸರು ಒಂದು ಉಪಾಯವನ್ನು ಮಾಡಿ ಹೋಗಿದ್ದರು. ತಮ್ಮ ಆಶ್ರಯಹೊಂದಿದ್ದ ದ್ರೋಹಿಗಳು ಮುಂದೆ ತಮ್ಮ ಸಹಾಯಕ್ಕೆ ಒದಗಬಹುದೆಂಬ ಹವಣಿಕೆಯಿಂದ, ಭರತಖಂಡದ ವಾಯುವ್ಯ ಈಶಾನ್ಯದ ಪರ್ವತಗಳಲ್ಲಿಯೂ ಅಲ್ಲಲ್ಲಿ ಸಮುದ್ರ ತೀರದಲ್ಲಿಯೂ ದುರ್ಗಗಳನ್ನು ಕಟ್ಟಿ, ಶಸ್ತ್ರಾಸ್ತ್ರಗಳಿಂದ ತುಂಬಿ,

ದ್ರೋಹಿಗಳ ಠಾಣ್ಯಗಳನ್ನಿಟ್ಟಿದ್ದರು. ಮಹಾತ್ಮನು ಸ್ವರ್ಗಸ್ಥನಾದಮೇಲೆ ರಾಕ್ಷಸರ ಪ್ರೇರಣೆಯಿಂದ ದ್ರೋಹಿಗಳು ರಾಜ್ಯದಮೇಲೆ ಧಾಳಿಗಳನ್ನಾರಂಭಿಸಿದರು.

ದೇಶದಲ್ಲಿ ಕ್ಷೋಭೆಯನ್ನೂ ಅವ್ಯವಸ್ಥೆಯನ್ನೂ ಹರಡಬೇಕೆಂದು ಸಂಕಲ್ಪಮಾಡಿ ಮಾಯಾವಿಗಳಾದ ರಾಕ್ಷಸರು ವೇಷ ಬದಲಾಯಿಸಿಕೊಂಡು ಬರದೊಡಗಿದರು. ಕೆಲವರು ವರ್ತಕರಂತೆ ಬಂದರು; ಕೆಲವರು ಮತಪ್ರಸಾರಕರಂತೆ ಬಂದರು; ಕೆಲವರು ಯಾತ್ರಿಕರಂತೆ ಬಂದರು. ಬಂದು, "ಐಶ್ವರ್ಯವೇ ಧರ್ಮ; ಅಧಿಕಾರವೇ ಕೈವಲ್ಯ; ಸ್ವಾರ್ಥವೇ ದೈವತ್ವ," ಎಂದು ಅಧರ್ಮವನ್ನು ಬೋಧಿಸಿದರು. ಅನೇಕರಿಗೆ ಅವರ ಬೋಧನೆ ಹಿತವಾಗಿ ಕಂಡು, ಐಶ್ವರ್ಯವನ್ನೂ ಅಧಿಕಾರವನ್ನೂ ಶೇಖರಿಸುವುದರಲ್ಲಿ ಮಗ್ನರಾದರು ಕೆಲವರು ಸಣ್ಣಪುಟ್ಟ ಪಾಳೆಯಗಾರರಾಗುವುದಕ್ಕೂ ಯತ್ನಿಸಿದರು. ರಾಕ್ಷಸರು ಏನೇನೋ ತೊಂದರೆಗಳನ್ನು ಹುಟ್ಟಿಸಿದರು. ಭಾಷಾ ವೈವಿಧ್ಯವನ್ನೇ ಒಂದು ದೊಡ್ಡ ವಿವಾದವಾಗಿ ಮಾಡಿದರು. ಮತಭಾವವನ್ನು ಹಾಲಾಹಲವನ್ನಾಗಿ ಪರಿವರ್ತಿಸಿದರು ಕ್ಷುದ್ರಕಾರಣಗಳಿಗಾಗಿ ಜನರು ಒಬ್ಬರನ್ನೊಬ್ಬರು ದ್ವೇಷಿಸುವಂತೆ ಮಾಡಿದರು. ಸಾಮಂತರಿಗೆ ಮಂಕು ಕವಿಸಿದರು. ತಾವು ಮಾಡುತ್ತಿರುವುದು ಪ್ರಜೆಗಳ ಕ್ಷೇಮಕ್ಕಾಗಿಯೇ ಎಂಬ ಭ್ರಾಂತಿಯಿಂದ ಈ ಸಾಮಂತರು ಏನೇನೋ ಪ್ರಯೋಗಗಳನ್ನು ಮಾಡಿದರು. ಮಹಾತ್ಮರ ಆದಿ ಶಿಷ್ಯರಾದ ಪಂಡಿತರು ಯಾವ ಬುದ್ಧಿವಾದ ಹೇಳಿದರೂ ಉಪಯೋಗವಾಗಲಿಲ್ಲ. ಅಪ್ಪಟ ಮದ್ಯವನ್ನು ಕುಡಿಯುವುದರ ಬದಲು ಬೆರಕೆಮಾಡಿ ಕುಡಿದರೆ ಏನಾಗುತ್ತದೆ ಎಂದು ದಸ್ಯುಗಳಮೇಲೆ ಪ್ರಯೋಗಮಾಡಿದರು. ವೇದಾಧ್ಯಯನ ಉತ್ತಮವೋ ಗಾರುಡಿಯ ಅಭ್ಯಾಸ ಲಾಭದಾಯಕವೋ ಎಂದು ಮಕ್ಕಳಮೇಲೆ ಹಲವಾರು ಪ್ರಯೋಗಗಳನ್ನು ಮಾಡಿದರು. ಇವುಗಳಿಂದ ಯಾವ ಪ್ರತಿಫಲವೂ ಬಾರದೆ ರಾಜಭಂಡಾರ ಬರಿದಾಯಿತು. ಸಾಮಂತರು ಹೊಸ ತೆರಿಗೆಗಳನ್ನು ವಿಧಿಸಿದರು. ನೀರಿಗೂ ಸುಂಕ ಕೊಡುವಂತಾಯಿತು. ತೆರಲಾರದ ಜನರು ಬಹು ಸಂಖ್ಯೆಯಲ್ಲಿ ಕಾಡಿಗೆ ಓಡಿಹೋದರು. ಹೀಗೆ ಒಂದುಕಡೆ ಅಂತಸ್ಥಿತ ಶಿಥಿಲತೆಯೂ ಇನ್ನೊಂದುಕಡೆ ಶತ್ರುಗಳ ಆಕ್ರಮಣ ಸನ್ನಾಹವೂ ಗಂಡಾಂತರಗಳಾಗಿ ಹಾರಿದ್ದುವು. ಆದಿಶಿಷ್ಯರ, ಪಂಡಿತರ, ಹಿರಿಮೆಯನ್ನರಿತು, ಅವರು ಹೇಳಿದಂತೆ ಸನ್ಮಾರ್ಗದಲ್ಲಿ ನಡೆಯುವವರ ಸಂಖ್ಯೆ ದಿನದಿನಕ್ಕೆ ಕಡಿಮೆಯಾಯಿತು. ತಾವೂ ತಮ್ಮ ಗುರುವೂ ಪ್ರಾರಂಭಿಸಿದ ನಿರ್ಮಾಣಕಾರ್ಯ ಅಪೂರ್ಣವಾಗಿಯೇ ಉಳಿಯುವುದೇನೋ ಎಂಬ ಶಂಕೆ ಅವರಲ್ಲಿ ಮೂಡಿತು.

ಅತ್ತಲಾಗಿ ಕಾಡಿಗೆ ಓಡಿಹೋದ ಬಡವರ ಪಾಡೇನಾಯಿತು?

ಆ ಕಾಡುಗಳಲ್ಲಿ ಭಯಂಕರಾಕೃತಿಯ ಕಾಡುಜನರು ವಾಸಿಸುತ್ತಿದ್ದರು. ಅವರು ಹಿಮವತ್ಪರ್ವತದ ಉತ್ತರದ ಸಾಮುಪ್ರದೇಶದಿಂದಲೂ ಶೀತವಲಯಪ್ರದೇಶದಿಂದಲೂ ಕದ್ದುಬಂದು ಕಾಡುಗಳಲ್ಲಿ ಸೇರಿಕೊಂಡಿದ್ದರು. ಅವರಿಗೆ ತೋಳನ ಮುಖ, ಕರಡಿಯ

ವೈ. ಅವರ ಆಯುಧಗಳು ಸುತ್ತಿಗೆ ಕುಡುಗೋಲು. ಮೊದಲು ಓಡಿಬಂದ ಬಡವ ರನ್ನು ಗುಲಾಮರನ್ನಾಗಿ ಮಾಡಿಕೊಂಡು, ದಿನಕ್ಕೆ ಒಬ್ಬನಂತೆ ಅವರನ್ನು ತಿನ್ನುತ್ತಾ ಬಂದರು. ಆದರೆ ಈ ಅಲ್ಪಗ್ರಾಸದಿಂದ ತೃಪ್ತಿಯಾಗಲಿಲ್ಲ. ಪುಷ್ಟಿಯಾಗಿ ಬೆಳೆದ ಶ್ರೀಮಂತ ಪ್ರಜೆಗಳನ್ನು ಭಕ್ಷಿಸಬೇಕೆಂಬ ಬಯಕೆ ಹಿರಿದಾಯಿತು. ಆಗ ಈ ದರಿದ್ರ ರನ್ನು ಕರೆದು, ಅವರಿಗೆ ಸುತ್ತಿಗೆ ಕುಡುಗೋಲುಗಳನ್ನು ಕೊಟ್ಟು, "ಹೋಗಿ, ಆ ಶ್ರೀಮಂತರನ್ನೆಲ್ಲ ಕೊಂದು ತೆಗೆದುಕೊಂಡು ಬನ್ನಿ. ನಿಮ್ಮ ಬಿಡುಗಡೆಮಾಡುತ್ತೇವೆ" ಎಂದರು. ಜೀವದಮೇಲೆ ಆಸೆ ಯಾರಿಗಿಲ್ಲ? ಆ ದರಿದ್ರರು ಕಾರ್ಯಸಾಧನೆಗಾಗಿ ಸಮಯ ಕಾಯುತ್ತಿದ್ದರು.

ರಾಕ್ಷಸರಿಗೆ ಈ ಸಂಚು ಹೇಗೋ ತಿಳಿದು, ಅವರು ಗಾಡಿಗಳಲ್ಲಿ ಧನಕನಕ ಗಳನ್ನೂ ಶಸ್ತ್ರಾಸ್ತ್ರಗಳನ್ನೂ ಹೇರಿಕೊಂಡು ಬಂದು, "ನಿಮ್ಮ ಇರುವಿಕೆಗೇ ಈಗ ಆಪತ್ತು ಬಂದಿದೆ. ಇಗೋ, ಇವನ್ನು ತೆಗೆದುಕೊಳ್ಳಿ. ಇದಕ್ಕೆ ಯಾವ ಆಧಾರವೂ ಬೇಡ. ನಮ್ಮಲ್ಲಿ ಸಂಬಂಧ ಬೆಳಸಿದರೆ ಸಾಕು." ಎಂದು ಭಾರತೀಯರಿಗೆ ಉಪದೇಶಿ ಸಿದರು. ಇದರಿಂದಾಗಬಹುದಾದ ತೊಂದರೆಗಳನ್ನು ಕಂಡು ಆದಿಶಿಷ್ಯರಾದ ಪಂಡಿ ತರು ಬೇಡ ಬೇಡವೆಂದರೂ, ಅನೇಕರು ಏಕೆ ಕೂಡದು ಎಂದು ಹಠಹಿಡಿದರು.

ರಾಜ್ಯದ ಸ್ಥಿತಿ ಹೇಗೆ ವಿಷಮವಾಗಿತ್ತು.

* * *

ಓಲೆಗ್ರಂಥದ ಭಾಷಾಂತರ ಇಲ್ಲಿಗೆ ನಿಂತಿದೆ. ಮುಂದೇನಾಯಿತು ಎನ್ನುವುದು ಕಾಲಕ್ರಮದಲ್ಲಿ ತಿಳಿಯುತ್ತದೆ.

—ಬಿ. ಚಂ.

ತದ್ವತ್ ಹುಲಿಯಹಾಗೆ ಕೂಗಿ ಜನರನ್ನು ಮೋಸಮಾಡಲು ಹೊರಟ ಒಬ್ಬ ಹುಡುಗನನ್ನು ಹುಲಿಯೆಂದೇ ನಂಬಿ ಹಲವರು ಹೊಡೆದು ಸಾಯಿಸಿದರೆಂಬ ಸುದ್ದಿ ಬಂದಿದೆ....ಮೋಸದ ಕೂಗಿನಿಂದ ಜನರನ್ನು ಮೋಹಗೊಳಿಸುವವರಿಗೂ ಇದೇ ಗತಿ ಎಂಬುದನ್ನು ಜಗತ್ತಿಗೆ ಸಾರುವುದಕ್ಕಾಗಿಯೇ ಈ ಘಟನೆ ನಡೆದಿರಬಹುದಲ್ಲವೆ?

ಅನರ್ಥಕೋಶ

ಉತ್ತಮಕಾದಂಬರಿ:— ಮುಂದಿನ ತಿಂಗಳು ಪ್ರಕಟವಾಗಲಿರುವ ಗ್ರಂಥ.

ಕಿವಿ:— ಕನ್ನಡಕವನ್ನು ತಗುಲಿಸಿಕೊಳ್ಳುವುದಕ್ಕಾಗಿ ನಾವು ಬೆಳೆಸಿಕೊಂಡಿರುವ ಉಪಕರಣ.

ಚರಿತ್ರೆ:— ಒಂದುಪಕ್ಷದವರಿಗೆ ಸರಿ ಎನಿಸಿರುವ ಸುಳ್ಳು.

ದೊಡ್ಡಮನುಷ್ಯ:— ಮಗುವಾಗಿಯೇ ಉಳಿದಿರುವ ಮಹಾನುಭಾವ.

ಪಾಯಿ:— ಸ್ತ್ರೀ.

ಮನಸ್ಸಾಕ್ಷಿ:— ಸಾಕು, ಮುಂದುವರಿಸಿದರೆ, ಪತ್ತೆ ಆದೀತು, ಎಂದುಎಚ್ಚರಿಸುವ ಒಳದನಿ.

ಮರ್ಯಾದೆ:— **ಇದು** ಹೊಟ್ಟೆತುಂಬಿರುವವರಿಂದ ಮಾತ್ರ ಸಾಧ್ಯ

ಮಹಾಯುದ್ಧ:— ಮಹಾಯುದ್ಧವನ್ನು ಕೊನೆಗಾಣಿಸಿದವರು ಅಮೇರಿಕನರೋ ರಷ್ಯನರೋ ಎಂಬ ವಾದವಿರುವಂತೆ, ಅದನ್ನು ಮೊದಲು ಮಾಡುವವರು ಅಮೇರಿಕನರೋ ರಷ್ಯನರೋ ಎಂಬ ವಾದ ಎದ್ದಿದೆ.

ಮೋಸ:— ಸಿನಿಮ ತಾರೆಯರ ಸೌಂದರ್ಯ.

ವೈಜ್ಞಾನಿಕ ಶಸ್ತ್ರಾಸ್ತ್ರ:— ಪೌಡರ್, ಲಿಪ್‌ಸ್ಟಿಕ್ ಇತ್ಯಾದಿ.

ವಿಶ್ರಾಂತಿ:— ಸೋಮಾರಿಗಳಿಗೆ ಇದು ಅತ್ಯಗತ್ಯ.

ಶಾಲೆ.— ದೇಶದ ಮಕ್ಕಳು ಮಕ್ಕಳಾಗಿಯೇ ಬೆಳೆಯಲು ನಾವು ಮಾಡಿರುವ ವ್ಯವಸ್ಥೆ.

ಸಕಪಾಪ:— ನಮ್ಮವರು ಮಂತ್ರಿಯಾದಾಗ ನಮಗೆ ತಗಲುವ ಬಿಸಿ.

ಸಾಲ:— ಗಗನ ಕುಸುಮ.

ಹರಿಜನ— **ಈ** ಪದವನ್ನು ಕ್ರೈಸ್ತರೂ ಬಳಸುವುದು ಸೋಜಿಗ.

ಹಣ:— ಸುಖ ಹೊರತು ಮಿಕ್ಕೆಲ್ಲವನ್ನೂ ದೊರಕಿಸುವ ವಸ್ತು

ಹೊಟ್ಟೆಪಾಕ:— ಬಡತನದ ಗೋಳನ್ನು ಮರೆಯಲು ಅನೇಕರು ಯದ್ವಾ ತದ್ವಾ ತಿನ್ನುತ್ತಾರೆ.

ನಾ. ಕ.

ಅತ್ಯಂತ ಯಶಸ್ವಿಯಾಗಿ ಪ್ರದರ್ಶಿಸಲ್ಪಡುತ್ತಿದೆ

ಬೆಂಗಳೂರು:

ವಿಜಯಲಕ್ಷ್ಮಿ — ಸೆಂಟ್ರಲ್ — ರೂಪಮಹಲ್

ಮೈಸೂರು: **ಪ್ರಭುದೇವ** ಚಿತ್ರಮಂದಿರಗಳಲ್ಲಿ

ದಿನವಹಿ 3 ಆಟಗಳು



ಶ್ರೀ ಸುಕುಮಾರ್ ಪ್ರೊಡಕ್ಷನ್ಸ್‌ರವರ—

ವಿಳೈಯಾಟ್ಟು ಬೊಮ್ಮೈ

(ತಮಿಳು)

ಕುಮಾರಿ ಕಮಲ— ಟಿ ಆರ್ ಮಹಾಲಿಂಗಂ— ವಿ. ಕೆ. ರಾಮಸ್ವಾಮಿ ತಂಗವೇಲು ಅಭಿನಯ

ವಿಧಿಗೆ ಮಾನವನು ಜಗತ್ತಿನಲ್ಲಿ ಒಂದು ಆಟದ ಗೊಂಬೆ ಎಂಬ ಸಿದ್ಧಾಂತವನ್ನು ಪ್ರತಿಪಾದಿಸುವ ಉತ್ತಮ ಸಾಮಾಜಿಕ ಚಿತ್ರ.

ನೀವು ಇನ್ನೂ ನೋಡಿಲ್ಲವಾದರೆ ಇಂದೇ ನೋಡಿ

BHARATI RELEASE

Printed by B. S. Iyengar, Bangalore City
Publisher—B. N. Gupta. Editor—M. Sivaram.